# ಆಳ್ವಾಸ್ ಹೊಂಗಿರಣ

ALVA'S HONGIRANA BILINGUAL QUARTERLY

ಆಳ್ವಾಸ್ ಪದವಿಪೂರ್ವ ಕಾಲೇಜು ಹಾಗೂ ಶಾಲೆಗಳ ತ್ರೈಮಾಸಿಕ ಸಂಚಿಕೆ

Scan and View Alva's

25 OCTOBER 2025 | VOLUME: 01 | ISSUE: 4 | PAGE: 08



ಭಾರತ ವೈವಿಧ್ಯತೆಯ ನೇಯ್ಗೆ: ವಿದ್ಯಾರ್ಥಿಗಳೇ ಭವಿಷ್ಯ 03

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ, ಉಪನ್ಯಾಸ, ಮಾರ್ಗದರ್ಶನ 06


# Alva's Pragati 2025: Empowering youth for Inclusive growth



**Moodubidire:** Upholding its commitment to social responsibility, Alva's Education Foundation successfully organized the 15th edition of its mega placement drive, Alva's Pragati, on August 1 and 2, 2025, at Vidyagiri campus in Moodubidire

The 15th edition of Alva's Pragati was carried out seamlessly from candidate registrations to absorption by the companies.

Over the two-day event, 14,245 job aspirants participated. Out of the 288 recruiting companies that attended, 260 companies shortlisted 3,734 candidates for the next stage, while 2,873 job seekers were offered on-the-spot placements in reputed companies.

Several reputed firms offered competitive packages across the sectors. Kingdom of Saudi Arabia-based leading industrial conglomerate Expertise recruited 37 candidates with a package of ₹9 lakh per annum. Global technology and services company Concentrix offered ₹5 lakh per annum to 5 candidates.

Tejaswini Groups selected 11 candidates for ₹6 lakh per annum, while Infosys BPM recruited 79 candidates. Fortune Groups, a Dubai-based hospitality firm, selected 5 candidates with packages between ₹5 to ₹8.75 lakh per annum are glimpse to note.

Vision and Mission: Under the guidance of Dr. M. Mohan Alva, 'Pragati' was meticulously spearheaded by the Management Trustee Vivek Alva. His universal vision of inclusive growth of society through empowering the youth has successfully completed its 15th edition in a grand note.

The preparations were carried out with utmost precision ranging from candidate registrations, company outreach, and promotional activities to student training sessions, awareness programs, student–organizer interactions, and comprehensive infrastructural arrangements.



**Successful 15th Edition**

**288** Companies participated

| 14 | 2,873 | 14,245 | 3,734 |
|---|---|---|---|
| Sectors | Spot offers | Participants | Selected for final round |

> **I am delighted to have been selected by Code Young Company. This job fair was organized very efficiently, and I am grateful to Alva's for this opportunity.**
>
> **– Anushree, select**



Opportunities for more than 20,000 job openings were created for talented candidates with qualifications ranging from SSLC to postgraduate degrees and other fields. To facilitate industrial recruitment, Pragati was organized into 14 sectors.

**Colour coding:** To ensure smooth functioning of the mega job fair, a colour-coded system was kept in place based on the candidates' educational qualifications. Identity cards were issued in different colours- SSLC/PUC (Red), ITI (Orange), Diploma (Pink), Degree (Green), B.E./B. Tech (Blue), Nursing and Paramedical (White), and Postgraduate (Yellow).

The recruitment process, systematically arranged with over a thousand computers, uninterrupted internet connectivity, and necessary furniture facilities. *See Page 05*

> **It was a great joy to see hundreds of companies gathered under one roof. I am delighted to have been selected by Expertise Company, which also provides overseas transportation and accommodation facilities.**
>
> **-Lespan Pinto, select**

> **Alva's dedication to education not as a business venture, but as a service to society is truly commendable and inspiring. It fosters a well-structured industrial ecosystem and offers students world-class educational opportunities.**
>
> **–Dinesh Gundu Rao,** Minister


ಸಂಪಾದಕೀಯ...

ವ್ಯಕ್ತಿತ್ವ ರೂಪಿಸುವ ಸಮಗ್ರ ಶಿಕ್ಷಣದ ಮಾದರಿ



2ನೇ ಪುಟದಲ್ಲಿ


# Shining Bright: Alva's PU College Celebrates Stellar NEET, CA, and NATA Results of 2024-25



Alva's Pre-University College continues to illuminate the path of academic excellence, with its students achieving extraordinary success in the National Eligibility cum Entrance Test (NEET), Chartered Accountancy (CA), and National Aptitude Test in Architecture (NATA) for the academic year 2024-2025. These remarkable results underscore the institution's dedication to fostering talent, instilling discipline and providing world-class guidance, driven by the relentless efforts of students, committed faculty, and a robust support ecosystem.

The NEET 2025 results, declared by the National Testing Agency on June 14, 2025 showcased Alva's students' brilliance amidst intense competition, with 22.76 lakh candidates registering nationwide. Out of 720 marks, 21 students scored above 550, 117 surpassed 500, and an impressive 596 secured above 400 marks. Over 450 students clinched admissions to medical colleges under government quotas in Karnataka and the All India Quota (AIQ), earning seats in top institutions. Despite a challenging Physics section in the May 4, 2025, exam, Alva's students excelled in Biology and Chemistry, leveraging rigorous NCERT- based training, mock tests, and individualized mentorship. This outstanding performance highlights the college's meticulous coaching, empowering students to navigate competitive counseling processes with confidence.

> **Entry to MBBS**
>
> Alva's Pre-University College has a remarkable track record of producing future doctors. From 2022 to 2024, 1,453 students secured medical seats and are currently pursuing their MBBS degrees. In 2025 alone, 457 more students qualified for medical admissions.

In the CA Foundation examination of 2025, conducted by the Institute of Chartered Accountants of India (ICAI), Alva's students shone brightly. Of the 96 students appeared, 43 cleared the exam, achieving a stellar 44.79% pass rate at Alva's, far exceeding the All-India pass rate of 15.09%.

*See Page 05*

ಸಮೂಹ ಸಂಪಾದಕರು
ಡಾ। ಎಂ. ಮೋಹನ ಆಳ್ವ


ಪ್ರಧಾನ ಸಂಪಾದಕರು
ವಿವೇಕ್ ಆಳ್ವ


ಸಂಪಾದಕರು
ಪ್ರೊ. ಮೊಹಮ್ಮದ್ ಸದಾಕತ್


ಕಾರ್ಯನಿರ್ವಾಹಕ ಸಂಪಾದಕರು
ಹರ್ಷವರ್ಧನ ಪಿ.ಆರ್.

ಸಂಪಾದಕೀಯ ಮಂಡಳಿ
ಕೆ.ವೇಣುಗೋಪಾಲ ಶೆಟ್ಟಿ
ಝಾನ್ಸಿ ಪಿ.ಎನ್.
ಡಾ.ಸುಧಾರಾಣಿ
ಟಿ.ಎ.ಎನ್. ಖಂಡಿಗೆ
ಡಾ। ಪದ್ಮನಾಭ ಶೆಣೈ
ಪ್ರಶಾಂತ್ ಎಂ. ಡಿ.
ಲಿಸ್ಸಿ ಸಜಿ, ಪ್ರಸಾದ್ ಶೆಟ್ಟಿ

ಪ್ರಕಾಶನ
ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ), ಮೂಡುಬಿದಿರೆ

ಸಂಚಿಕೆ ನಿರ್ವಹಣೆ
ಡಾ. ಡಿ.ವಿ. ಪ್ರಕಾಶ್ , ದೀಪಕ್ ಭಟ್, ನವೀನ ರೈ, ಪ್ರಭು ಎ. ಜೆ. ,ದೇವಿಪ್ರಸಾದ್, ಯಶ ಶೆಟ್ಟಿ , ತೇಜಸ್, ಗಣಪತಿ ನಾಯ್ಕ , ರಾಜೇಶ್ ಶೆಟ್ಟಿ , ರಮ್ಯಾ ರೈ, ಉದಯ್ ಕಲ್ಲಡ್ಕ , ಅಕ್ಷಯ್ ಕುಮಾರ್, ರವಿ ಶೆಣೈ, ನಿಶಾನ್ ಕೋಟ್ಯಾನ್, ರವಿ ಕೋಟ್ಯಾನ್

ಮುದ್ರಣ- ಪ್ರಸರಣ-ಸಹಕಾರ
ಶಾಂತಾರಾಮ್ ಕಾಮತ್
ಶಾಂತಾರಾಮ್ ನಾಯಕ್
ಪದ್ಮರಾಜ್ ರೈ ಕೆ. , ಪ್ರಣೀತ್ ಶೆಟ್ಟಿ

### 'ಆಳ್ವಾಸ್' ಬ್ರ್ಯಾಂಡ್ ಹಿಂದಿನ ಅರ್ಧ ಶತಮಾನದ ಪರಿಶ್ರಮ

- ಕಲಿಕೆ, ಕ್ರೀಡೆ, ಸಾಂಸ್ಕೃತಿಕ ರಂಗಗಳಿಗೆ ಸಮಾನ ಅವಕಾಶ
- ಪ್ರತಿಭೆ, (ಕಲಿಕೆ, ಕ್ರೀಡೆ, ಸಾಂಸ್ಕೃತಿಕ ), ಕನ್ನಡ ಮಾಧ್ಯಮ, (ಹಿರಿಯ ಪ್ರಾಥಮಿಕ- ಪ್ರೌಢ) ಶಾಲೆಗಳ ಉಚಿತ ಶಿಕ್ಷಣದ ಅವಕಾಶವನ್ನು ಕಳೆದ 30 ವರ್ಷಗಳಿಂದ ನಿರಂತರ ಕಾಯ್ದುಕೊಂಡು ಬಂದ ಹೆಗ್ಗಳಿಕೆ.
- ಕಲೆ, ವಾಣಿಜ್ಯ, ವಿಜ್ಞಾನ ವಿಷಯಗಳೊಂದಿಗೆ ಎಲ್ಲ ಸ್ಪರ್ಧಾತ್ಮಕ ತರಬೇತಿಗಳು ಮತ್ತು ಬಯಲು ಶಿಕ್ಷಣಗಳ ಅನುರೂಪದ ಹೊಂದಾಣಿಕೆಯೊಂದಿಗೆ ಸಮಗ್ರ ಶಿಕ್ಷಣದ ಪರಿಕಲ್ಪನೆ.
- ಆಚಾರ- ವಿಚಾರ, ಆಹಾರ- ವಿಹಾರ, ಭಾಷೆ -ಸಂಸ್ಕೃತಿಗಳಲ್ಲಿ ಬಹುತ್ವದ ಪರಿಕಲ್ಪನೆಯ ಆಳ್ವಾಸ್ ಒಂದು 'ಮಿನಿ ಭಾರತ'.

# ವ್ಯಕ್ತಿತ್ವ ರೂಪಿಸುವ ಸಮಗ್ರ ಶಿಕ್ಷಣದ ಮಾದರಿ



ಸಂಪಾದಕೀಯ
ಡಾ। ಎಂ. ಮೋಹನ ಆಳ್ವ
ಸಮೂಹ ಸಂಪಾದಕರು

ಆಧುನಿಕ ಸಮಾಜದಲ್ಲಿ ಶಿಕ್ಷಣ ಅಂದಕೂಡಲೇ ಹೆಚ್ಚಿನವರ ಯೋಚನೆ ಹರಿಯುವುದೇ ಅದು ಹೆಚ್ಚು ಸಂಬಳದ ಉದ್ಯೋಗವನ್ನು ಪಡೆಯಲು ಇರುವ ರಹದಾರಿ ಎಂದು. ಹೆಚ್ಚು ಆದಾಯ ತರುವ ಮತ್ತು ಸಮಾಜದಲ್ಲಿ ಪ್ರತಿಷ್ಠಿತ ಎಂದು ಭಾವಿಸಲಾದ ವೃತ್ತಿಗಳನ್ನು ಪಡೆಯುವುದೇ ಎಲ್ಲರ ಗುರಿಯಾಗಿರುವುದರಿಂದ ಅದನ್ನು ನೀಡಬಲ್ಲ ಶಿಕ್ಷಣಕ್ಕಾಗಿ ಸಕ್ಕರೆಗೆ ಮುತ್ತುವ ಇರುವೆಗಳಂತೆ ಮುತ್ತಿಕೊಳ್ಳುವುದು ಇಂದು ಮಾಮೂಲಿ ದೃಶ್ಯ. ಇದರ ಪರಿಣಾಮವಾಗಿ ಹೆಚ್ಚು ಶುಲ್ಕ ಪಡೆಯುವ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚು ರ್‍ಯಾಂಕ್‌ಗಳು ಬರುತ್ತವೆ ಎಂದು ಹೆಚ್ಚಿನ ಹೆತ್ತವರು ಭಾವಿಸುತ್ತಾರೆ. ಈ ಭಾವನೆಗಳೇ ಸತ್ಯ ಎನ್ನುವಂತೆ ಶಿಕ್ಷಣ ಕ್ಷೇತ್ರದಲ್ಲಿ ಜಾಹೀರಾತು ಉದ್ಯಮವು ಸಕ್ರಿಯವಾಗಿದೆ. ಜಾಹೀರಾತಿಗೆ ತಲೆದೂಗುವ ಮಂದಿ ವಸ್ತುಗಳ ಖರೀದಿಯಲ್ಲಿ ಅದರ ಗುಣವನ್ನಾಗಲೀ, ಅದರ ಅಗತ್ಯವನ್ನಾಗಲೀ, ಅದರ ಬೆಲೆಗಳನ್ನಾಗಲೀ ಗಮನಿಸದೆ ಆಕರ್ಷಣೆಗೆ ಮರುಳಾಗಿ ಮನೆತುಂಬಾ ಉಪಯೋಗವಿಲ್ಲದ ವಸ್ತುಗಳನ್ನು ಸೇರಿಸಿಡುವಂತೆಯೇ ಇದೂ ಕೂಡಾ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಿಕ್ಷಣ ಸಂಸ್ಥೆ ಹುಡುಕುವ ಹೆತ್ತವರು ಈ ಆಕರ್ಷಣೆಗೆ ಒಳಗಾಗಿ ಜೀವಮಾನವಿಡೀ ಸಂಗ್ರಹಿಸಿಟ್ಟ ಹಣವನ್ನು ಸುರಿದು ತಾವು ಮಕ್ಕಳಿಗಾಗಿ ಬಯಸಿದ ಶಿಕ್ಷಣ ದೊರೆಯಿತೆಂದೂ, ಕನಸು ನನಸಾಯಿತೆಂದೂ ಹರ್ಷಗೊಳ್ಳುತ್ತಾರೆ.

ಮಕ್ಕಳ ಚಲನವಲನಗಳನ್ನು ಹತ್ತಿರದಿಂದ ಗಮನಿಸುವ ಹೆತ್ತವರಿಗೆ ತಮ್ಮ ಮಕ್ಕಳ ಪ್ರತಿಭಾ ಮಟ್ಟವು ಸಣ್ಣ ತರಗತಿಗಳಿಂದಲೇ ಅರಿವಿಗೆ ಬರಬೇಕು. ಹೈಸ್ಕೂಲ್ ವಿದ್ಯಾಭ್ಯಾಸದ ಮುಕ್ತಾಯದಲ್ಲಾದರೂ ಇದು ಹೆಚ್ಚು ನಿಚ್ಚಳವಾಗಿ ಕಾಣಿಸಬೇಕು. ಆದರೆ ತಮ್ಮ ತಮ್ಮ ಕಾರ್ಯ ಬಾಹುಳ್ಯದಿಂದಾಗಿಯೋ, ವಿವಿಧ ಹವ್ಯಾಸ-ಆಸಕ್ತಿಗಳಿಂದಾಗಿಯೋ ಮಕ್ಕಳನ್ನು ಈ ರೀತಿ ಪರಾಮರ್ಶಿಸುವವರು ಕಡಿಮೆ. ಇಂಥ ಹೆತ್ತವರ ಕನಸುಗಳು ಮಾತ್ರ ಬಲು ದೊಡ್ಡದಾಗಿರುತ್ತವೆ. ಮಕ್ಕಳು ಎಸ್.ಎಸ್.ಎಲ್.ಸಿ ಪರೀಕ್ಷೆ ತೇರ್ಗಡೆಯಾದರೆ ಸಾಕು ವಿಜ್ಞಾನ, ಅದರಲ್ಲೂ ಪಿಸಿಎಂಬಿ ಸಂಯೋಜನೆಯೇ ಅವರಿಗೆ ಎದ್ದು ಕಾಣುವುದು. ಉನ್ನತ ಆದಾಯ ತರುವ ಅಥವಾ ಪ್ರತಿಷ್ಠಿತ ವೃತ್ತಿ ಮೂಲಗಳನ್ನು ಇಂಗ್ಲಿಷ್ ಮಾಧ್ಯಮ, ಸಿ.ಬಿ.ಎಸ್.ಇ, ಐ.ಸಿ.ಎಸ್.ಇ. ಗಳಲ್ಲಿ ಕಾಣುವ ಹೆತ್ತವರ ದೃಷ್ಟಿಯಲ್ಲಿ ವಾಣಿಜ್ಯ, ಕಲಾ ಸಂಯೋಜನೆಗಳಂತೂ ಊಟಕ್ಕಿಲ್ಲದ ಉಪ್ಪಿನಕಾಯಿಯಂತೆ. ಇಂಥಾ ಧೋರಣೆಗಳು ಇಂದು ಅದೆಷ್ಟೋ ಕಲಾ ಸಂಯೋಜನೆಯ ಕಾಲೇಜುಗಳಿಗೆ ಬೀಗ ಜಡಿಯುವಂತೆ ಮಾಡಿದೆ. ಇದರ ಭರಪೂರ ಲಾಭಪಡೆಯುವ ಹೊಸಹೊಸ ಶಿಕ್ಷಣ ಸಂಸ್ಥೆಗಳು ವಿಜ್ಞಾನದ, ತಪ್ಪಿದರೆ ವಿಜ್ಞಾನ-ವಾಣಿಜ್ಯ ಸಂಯೋಜನೆಗಳಿರುವ ಕಾಲೇಜುಗಳನ್ನು ಹುಟ್ಟುಹಾಕುತ್ತಿವೆಯೇ ಹೊರತು ವಿಜ್ಞಾನ, ವಾಣಿಜ್ಯ, ಕಲಾವಿಭಾಗಗಳನ್ನು ಸಮಾನವಾಗಿ ಕಾಣುವ ಸಮಗ್ರ ಶಿಕ್ಷಣದ ತತ್ವಗಳನ್ನು ಪರಿಪಾಲಿಸಲಾರವು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ(ರಿ.)ದ ಅಂಗಸಂಸ್ಥೆ ಆಳ್ವಾಸ್ ಪದವಿಪೂರ್ವ ಕಾಲೇಜನ್ನು ಹುಟ್ಟು ಹಾಕುವಾಗಲೂ ಇದೇ ಪ್ರಶ್ನೆಯನ್ನು ಅನೇಕ ಮಂದಿ ನನ್ನ ಹಿತೈಷಿಗಳೇ ನನ್ನ ಮುಂದಿರಿಸಿದ್ದರು. ಅವರೆಲ್ಲರೂ ನನ್ನ ಒಳಿತನ್ನು ಬಯಸಿ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆಯೇ ಹೊರತು ಈ ಸಂಯೋಜನೆಗಳ ವಿರೋಧಿಗಳು ಅವರಲ್ಲ ಎನ್ನುವುದು ನನಗೆ ತಿಳಿದಿದೆ. ಬಯಲ ಶಿಕ್ಷಣದ ಸಹಭಾಗಿತ್ವದಲ್ಲಿ ವೃತ್ತಿಶಿಕ್ಷಣಕ್ಕೆ ತೆರೆದುಕೊಂಡ ಮೊದಲಿನಿಂದಲೂ ನನಗೆ ಸಮಗ್ರ ಶಿಕ್ಷಣದಲ್ಲಿಯೇ ಆಸಕ್ತಿ. ಶಿಕ್ಷಣ ಸಂಸ್ಥೆಯ ಕುರಿತು ಚಿಂತಿಸುವುದರ ಪೂರ್ವದಲ್ಲೇ ವೈದ್ಯನಾಗಿ ವೃತ್ತಿ ಪ್ರಾರಂಭಿಸಿದ ದಿನಗಳಲ್ಲಿ ಆರ್ಥಿಕ ಸಮಸ್ಯೆ ಕಾಡುತ್ತಿದ್ದರೂ ಉಳ್ಳವರಿಂದ ಎರವಲು ಪಡೆದು ನಾನು 'ಏಕಲವ್ಯ ಸ್ಪೋರ್ಟ್ಸ್ ಕ್ಲಬ್'ನ್ನು ಸ್ಥಾಪಿಸಿ ರಾಷ್ಟ್ರೀಯ ಕ್ರೀಡಾಪಟುಗಳನ್ನು ರೂಪಿಸಿದ ಕತೆ ನಿಮಗೆ ಕೆಲವರಿಗಾದರೂ ತಿಳಿದಿರಬಹುದು. ಹೀಗಿರುವಾಗ ವ್ಯಾಪಾರೀ ಮನೋಭಾವದಿಂದ ಶಿಕ್ಷಣ ಸಂಸ್ಥೆಯನ್ನು ಹುಟ್ಟುಹಾಕುವ ಯೋಚನೆಯು ನನ್ನ ಮನಸ್ಸಿನಲ್ಲಿ ಮೂಡಲು ಸಾಧ್ಯವಾಗುವುದಾದರೂ ಹೇಗೆ?. ಶಿಕ್ಷಣ ಸಂಸ್ಥೆಯೆಂದರೆ ಅದು ಅದರ ಸಮಗ್ರತೆಯಿಂದಲೇ ನನ್ನ ಕಣ್ಣ ಮುಂದೆ ನಿಂತಿದೆ. ಇದಕ್ಕೆ ಪರ್ಯಾಯ ಆಲೋಚನೆ ಬರಲು ಸಾಧ್ಯವೇ ಇಲ್ಲ. ಅದರಂತೆ ವಿಜ್ಞಾನ, ವಾಣಿಜ್ಯ, ಕಲಾ ವಿಭಾಗಗಳ ಸಂಯೋಜನೆಗಳು ಸೇರಿಯೇ ಆಳ್ವಾಸ್ ಪದವಿಪೂರ್ವ ಕಾಲೇಜು ಅಸ್ತಿತ್ವಕ್ಕೆ ಬಂದಿತು.

ಸಮಗ್ರ ಶಿಕ್ಷಣದ ಪದವಿಪೂರ್ವ ಕಾಲೇಜನ್ನು ಅಸ್ತಿತ್ವಕ್ಕೆ ತರುವುದರ ಕುರಿತು ಚಿಂತಿಸುತ್ತಿರುವಾಗಲೇ ಸ್ವಲ್ಪ ಭಿನ್ನವಾಗಿ ಯೋಚಿಸಲು ನಾವು ಪ್ರಾರಂಭಿಸಿದೆವು. ಇದಕ್ಕಾಗಿ ನನ್ನ ಹಿತೈಷಿಗಳನೇಕರ ಸಲಹೆ ಸೂಚನೆಗಳನ್ನು ನಾನು ಪಡೆದಿದ್ದೇನೆ. ಅಂತಿಮವಾಗಿ ಆಳ್ವಾಸ್ ಪದವಿಪೂರ್ವ ಕಾಲೇಜು ನೂರರಲ್ಲಿ ನೂರ ಒಂದನೆಯ ಕಾಲೇಜಾಗುವುದು ನನಗೆ ಇಷ್ಟವಿರಲಿಲ್ಲ. ಆಗ ಏನು ಮಾಡಬಹುದೆಂದು ಯೋಚಿಸಿದಾಗ ಈ ಮೂರು ಸಂಯೋಜನೆಗಳನ್ನು ಸಾಂಪ್ರದಾಯಿಕವಾಗಿ ನೀಡುವ ಕಾಲೇಜುಗಳ ಬದಲು ಈಗಾಗಲೇ ದೇಶದ ಕೆಲವು ಕಡೆಗಳಲ್ಲಿ ನೀಡುತ್ತಿರುವ ವೃತ್ತಿಯಾಧಾರಿತ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ತರಬೇತಿಗಳನ್ನು ನೀಡಿದರೆ ಹೇಗೆ ಎಂಬ ಚಿಂತನೆ ಮನಸ್ಸಿನಲ್ಲಿ ಮೂಡಿತು. ಈ ಬಗೆಗಿನ ಹೆಚ್ಚಿನ ತಿಳುವಳಿಕೆಗಳಾಗಲೀ, ಚಿಂತನೆಗಳಾಗಲೀ ನನ್ನಲ್ಲಿ ಇರಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಕೆಲವೊಂದು ಟ್ಯೂಶನ್ ಸೆಂಟರ್‌ಗಳಲ್ಲಿ ಮಾತ್ರ ಸಣ್ಣ ಮಟ್ಟದಲ್ಲಿ ಈ ಸೌಲಭ್ಯವು ದೊರೆಯುತ್ತಿತ್ತು. ಇದರಿಂದ ಸಮಾಜದ ಕೆಲವೇ ಕೆಲವು ಮಂದಿ ಡಾಕ್ಟರರಾಗಲು, ಇಂಜಿನಿಯರರಾಗಲು, ಚಾರ್ಟೆಡ್ ಅಕೌಂಟೆಂಟ್ ಆಗಲು, ಐಎಎಸ್-ಐಪಿಎಸ್ ಮಾಡಲು ಸಾಧ್ಯವಾಗುತ್ತಿತ್ತು. ನಮ್ಮ ಕಾಲೇಜಿನಲ್ಲಿ ಹೆಚ್ಚು ವಿದ್ಯಾರ್ಥಿಗಳು ಇರಬೇಕು, ಅವರು ಮಧ್ಯಮ-ಕೆಳಮಧ್ಯಮ ಮತ್ತು ಬಡತನದ ರೇಖೆಗಿಂತ ಕೆಳಗಿನವರಾಗಿರಬೇಕು, ಇಂಥವರನ್ನು ಸಮಾಜದ ಮುಂಚೂಣಿಗೆ ತರಬೇಕೆಂಬುದೇ ನನ್ನ ಉದ್ದೇಶವಾಗಿತ್ತು. ಪರಿಣಾಮವಾಗಿ ಸಮಗ್ರ ಶಿಕ್ಷಣದ ಜೊತೆಗೆ ಸಂಯೋಜಿತ ಪದ್ಧತಿಯಲ್ಲಿ ವಿಜ್ಞಾನ-ವಾಣಿಜ್ಯ-ಕಲಾ ವಿಷಯಗಳಿಗೆ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿಗಳನ್ನು ವ್ಯವಸ್ಥಿತವಾಗಿ ಮತ್ತು ಪರಿಣಾಮಕಾರಿಯಾಗಿ ನೀಡಲು ಉಪಕ್ರಮಿಸಿದೆವು. ಕಳೆದ 27 ವರ್ಷಗಳಲ್ಲಿ ಆಳ್ವಾಸ್ ಪದವಿಪೂರ್ವ ಕಾಲೇಜಿನಿಂದ ತರಬೇತಿ ಪಡೆದು ವಿವಿಧ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳು ಉತ್ಕೃಷ್ಟ ಬದುಕನ್ನು ಕಟ್ಟಿಕೊಂಡಿರುವುದನ್ನು ಕಾಣುವಾಗ ನನಗೆ ಸಾರ್ಥಕ್ಯದ ಭಾವ ಉಂಟಾಗುತ್ತದೆ. ಐಎಎಸ್, ಐಪಿಎಸ್, ಮೆಡಿಕಲ್, ಇಂಜಿನಿಯರಿಂಗ್, ಚಾರ್ಟೆಡ್ ಅಕೌಂಟೆಂಟ್, ಸಿನೆಮಾ, ಕ್ರೀಡೆ, ಕಲೆಗಳಲೇ ಮುಂತಾದ ಕ್ಷೇತ್ರಗಳಲ್ಲಿ ಸರ್ವೋತ್ಕೃಷ್ಟ ಬದುಕನ್ನು ಬಹುಸಂಖ್ಯೆಯಲ್ಲಿ ಕಟ್ಟಿಕೊಂಡಿರುವ ನಮ್ಮ ಹಳೆ ವಿದ್ಯಾರ್ಥಿಗಳ ಯಾದಿಯನ್ನು ನೋಡಿದರೆ ಯಾರಿಗಾದರೂ ಆಶ್ಚರ್ಯವಾಗದಿರಲಾರದು. ಮೂಡುಬಿದಿರೆಯಂಥಾ ಪುಟ್ಟ ಊರಿನಿಂದ, ನನ್ನಂಥಾ ಒಬ್ಬ ಸಾಧಾರಣಾ ವೈದ್ಯನಿಂದ ಇದೆಲ್ಲಾ ಸಾಧ್ಯವಾದುದು ಕನಸೋ, ನನಸೋ ಎಂದು ಅಚ್ಚರಿಯಾಗುತ್ತದೆ. ಆದರೆ ಪದವಿಪೂರ್ವ ವ್ಯವಸ್ಥೆಯಲ್ಲಿ ಆಮೂಲಾಗ್ರ ತೊಡಗಿಸಿಕೊಂಡಿರುವ ನನಗೆ, ನನ್ನ ಬೆವರಿಗೆ ಸಿಕ್ಕಿದ ಫಲವಿದು ಎನ್ನುವ ಸಾರ್ಥಕ್ಯದ ಭಾವನೆ ಬರುತ್ತಿದೆ. ಸಮಾಜದಲ್ಲಿ ಈ ವ್ಯವಸ್ಥೆಯಿಂದ ಇನ್ನೂ ಹೆಚ್ಚು ಹೆಚ್ಚು ಸಹಕಾರಿಯಾಗಲು ಇರುವ ಅವಕಾಶಗಳು ಒದಗಿ ಬರಲಿ ಎನ್ನುವುದೇ ನನ್ನ ಹೃದಯಾಂತರಾಳದ ಆಸೆಯಾಗಿದೆ.

ಎಂದಿನಂತೆಯೆ 'ಆಳ್ವಾಸ್ ಹೊಂಗಿರಣ' ತ್ರೈ ಮಾಸಿಕವನ್ನು ನಿಮ್ಮ ಕೈಯಲ್ಲಿರಿಸುತ್ತಿದ್ದೇವೆ. ವಿದ್ಯೆಯ ಜೊತೆಗೆ ವಿದ್ಯಾರ್ಥಿಗಳಿಗೆ ಉದ್ಯೋಗದ ಅವಕಾಶಗಳನ್ನು ಕಲ್ಪಿಸಿಕೊಡುವ 'ಆಳ್ವಾಸ್ ಪ್ರಗತಿ' ಬೃಹತ್ ಉದ್ಯೋಗ ಮೇಳ ಮತ್ತು ರಾಷ್ಟ್ರಾಭಿಮಾನದ ಸ್ವಾತಂತ್ರ್ಯ ದಿನಾಚರಣೆಯ ವಿಶೇಷ ವರದಿಗಳನ್ನು ಹೊತ್ತು ಈ ಬಾರಿಯ ಹೊಂಗಿರಣ ಹೊರಬರುತ್ತಿದೆ. ಪ್ರೀತಿಯಿಂದ ಸ್ವೀಕರಿಸುತ್ತೀರೆಂಬ ಭರವಸೆ ನನಗಿದೆ.

# 'Alva's Belaku' in New premise




**MOODBIDRI:** The 'Belaku' Counselling Centre of Alva's Education Foundation has been shifted to the Alva's Pre-University College and formally inaugurated on 9th August 2025.

Speaking after inaugurating the facility, Dr. M. Mohan Alva, chairman of the foundation, said that among all living beings, humans are unique due to their intellect, imagination, moral values, and ability to shape society. However, these exceptional qualities also make them more vulnerable to emotional instability.

He noted that students, in particular, face challenges when they push themselves beyond their limits, especially due to competition, high ambitions, and parental pressure. "When they fail to achieve expected results, it can have adverse effect on their mental health, making timely and empathetic counselling is essential for them," he stressed.

The event was attended by the trustee Vivek Alva, PU College Principal Prof. Sadakat, chief counsellor Renita D'Souza, Vice-Principal Jancy P.N., counsellors Ann D'Costa, Suzan Shetty, and others.

**Facility:** The centre offers therapies including Cognitive Behavioural Therapy, Rational Emotive Behaviour Therapy, relaxation techniques, bibliotherapy, music therapy, and holistic references to Ayurveda, Naturopathy, Allopathy, along with bi-weekly Homeopathic consultations addressing physical and psychological wellness. The counselling centre also collaborates with key associations such as the CPC Committee, Suggestion Box Committee, and Anti-Drug Committee, while actively contributing to the student mentorship process, ensuring holistic guidance and support.

Centre provides a safe, confidential space dedicated to students' mental and emotional well-being. Supports individuals in navigating academic stress, personal challenges, and emotional struggles through one-on-one sessions and group programs. By helping untangle confusion and build resilience, we aim to guide students toward clarity. confidence, and personal growth, fostering brighter and healthier minds for a stronger and more balanced future.

With its student-friendly environment and holistic approach, the centre continues to inspire personal growth, emotional strength, and overall well-being.

# ಭಾರತ ವೈವಿಧ್ಯತೆಯ ನೇಯ್ಗೆ: ವಿದ್ಯಾರ್ಥಿಗಳೇ ಭವಿಷ್ಯ

## ಆಳ್ವಾಸ್ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಲೆ. ಜನರಲ್ ಅರುಣ್ ಅನಂತನಾರಾಯಣ್

**ಮೂಡುಬಿದಿರೆ:** ಭಾರತ ಎಂದರೆ ವೈವಿಧ್ಯತೆಯನ್ನು ಒಗ್ಗೂಡಿಸಿದ ನೇಯ್ಗೆ. ಇದರ ಭವಿಷ್ಯವೇ ವಿದ್ಯಾರ್ಥಿಗಳು, ಅದನ್ನು ರೂಪಿಸುವವರು ಶಿಕ್ಷಕರು ಎಂದು ಭಾರತೀಯ ಸೇನೆಯ ನಿವೃತ್ತ ಲೆಫ್ಟಿನೆಂಟ್ ಜನರಲ್ ಅರುಣ್ ಅನಂತನಾರಾಯಣ್ ಬಣ್ಣಿಸಿದರು.

ವಿದ್ಯಾಗಿರಿಯ ಸುಂದರಿ ಆನಂದ ಆಳ್ವ ಆವರಣದ ಕೆ. ವಿ. ಸುಬ್ಬಣ್ಣ ಬಯಲು ರಂಗ ಮಂದಿರದ ವೇದಿಕೆಯಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.) ಹಮ್ಮಿಕೊಂಡ ೭೯ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಸುಮಾರು 15 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕೇಸರಿ, ಬಿಳಿ, ಹಸಿರು ಜೊತೆ ನೀಲಿ ಬಣ್ಣಗಳ ದಿರಿಸು ತೊಟ್ಟು ಅಶೋಕ ಚಕ್ರ ಹಿಡಿದು ನಿಂತು ರೂಪಿಸಿದ್ದ 'ತ್ರಿವರ್ಣ ಧ್ವಜ'ದ ಭವ್ಯ ಬಯಲು ಸಭಾಂಗಣದಲ್ಲಿ ವರ್ಷ ಸಿಂಚನದ ನಡುವೆ ಹೆಮ್ಮೆಯಿಂದ ಧ್ವಜಾರೋಹಣ ನೆರವೇರಿಸಿದ ಅವರು, ಸ್ವಾತಂತ್ರ್ಯ ದಿನದ ಆಚರಣೆಯ ಅದ್ದೂರಿ ವೈಭವವನ್ನು ಸಂಭ್ರಮಿಸಿ, ಶುಭಾಶಯ ತಿಳಿಸಿದರು.

ವಿದ್ಯಾರ್ಥಿಗಳ ಸಾಧನೆಗೆ ಆಕಾಶವೇ ಮಿತಿ. ನೀವು ನಿಮ್ಮ ಕನಸನ್ನು ಸಾಕಾರಗೊಳಿಸಿ. ಶಿಕ್ಷಕರು ಕರ್ತವ್ಯದ ಜೊತೆ ಭವಿಷ್ಯ ರೂಪಿಸುವ ಕಾಳಜಿಯನ್ನೂ ಹೊಂದಿರಬೇಕು. ಭಾರತಕ್ಕೆ ವೈಭವಯುತ ಭವಿಷ್ಯವಿದೆ. ಶ್ರೇಷ್ಠ ದೇಶವಾಗಿಸಿ ಎಂದರು.

ಬ್ರಿಟೀಷರ ವಸಾಹತು ಆಡಳಿತಕ್ಕೆ ಒಳಪಟ್ಟಿದ್ದ ನಮಗೆ ಶಿಕ್ಷಣ, ವೈದ್ಯಕೀಯ, ಉದ್ಯೋಗ ಭದ್ರತೆ ಸೇರಿದಂತೆ ಬಹುತೇಕ ಮೂಲ ಸೌಕರ್ಯಗಳೇ ಇರಲಿಲ್ಲ. ಅಲ್ಲಿಂದ ನಾವೀಗ ಎಲ್ಲವನ್ನೂ ಹೊಂದಿರುವ ಸ್ಥಿತಿಗೆ ಬಂದಿದ್ದೇವೆ. ಭಾರತದ ಸ್ವಾತಂತ್ರ್ಯ ಹಾಗೂ ಅಭಿವೃದ್ಧಿಯು ಕೇವಲ ಒಬ್ಬ ವ್ಯಕ್ತಿಯ ಅಥವಾ ಸೇನೆಯ ಹೋರಾಟವಲ್ಲ. ದೇಶದ ಜನತೆಯ ಒಗ್ಗಟ್ಟಿನ ಫಲ ಎಂದು ವಿಶ್ಲೇಷಿಸಿದರು.

ಎಲ್ಲಿ ಮನಸ್ಸು ಭಯವಿಲ್ಲದೇ, ತಲೆಯು ತಗ್ಗದೇ, ಜ್ಞಾನವು ಮುಕ್ತವಾಗಿ, ದೇಶ ಗೋಡೆಗಳಿಂದ ವಿಭಜನೆಗೊಳ್ಳದೇ, ಸತ್ಯ ತುಂಬಿದ ಮಾತು, ಪರಿಪೂರ್ಣತೆ, ಸ್ವಯಂ ಚಿಂತನೆಯಿಂದ ತುಂಬಿದ ಬುದ್ಧಿಯಿಂದ ನಮ್ಮ ದೇಶವು ಎಚ್ಚೆತ್ತುಕೊಳ್ಳಲಿ ಎಂಬ ರಾಷ್ಟ್ರಕವಿ ರವೀಂದ್ರ ಠಾಗೋರ್ ಅವರ ಕವನದ ಸಾಲುಗಳನ್ನು ಅವರು ಹೆಮ್ಮೆಯಿಂದ ನುಡಿದರು.






ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ| ಎಂ. ಮೋಹನ ಆಳ್ವ, ಶಾಸಕ ಉಮಾನಾಥ ಕೋಟ್ಯಾನ್, ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿಗಳಾದ ವಿವೇಕ್ ಆಳ್ವ, ಡಾ| ವಿನಯ ಆಳ್ವ ಹಾಗೂ ಡಾ| ಗ್ರೀಷ್ಮಾ, ಡಾ| ಹನಾ ವಿವಿಧ ಕಾಲೇಜುಗಳ ಪ್ರಾಂಶುಪಾಲರು ಇದ್ದರು. ಡೀನ್ ಕೆ. ವೇಣುಗೋಪಾಲ ಶೆಟ್ಟಿ ಹಾಗೂ ಉಪನ್ಯಾಸಕ ರಾಜೇಶ್ ಡಿಸೋಜ ಕಾರ್ಯಕ್ರಮ ನಿರೂಪಿಸಿದರು.



ಲೆ.ಜ. ಅರುಣ್ ಅನಂತ ನಾರಾಯಣ್ ಅವರು, ಎನ್‌ಸಿಸಿ ಕೆಡೆಟ್ ಸೀನಿಯರ್ ಅಂಡರ್ ಆಫೀಸರ್ ಅರ್ಚನಾ ನಾಗರಾಜ್ ಅವರಿಂದ ಗೌರವ ರಕ್ಷೆ ಸ್ವೀಕರಿಸಿದ ಬಳಿಕ ಎನ್‌ಸಿಸಿ ಜೂನಿಯರ್ ಅಂಡರ್ ಆಫೀಸರ್‌ಗಳಾದ ಸಂಜುಶ್ರೀ, ಗೀತಾ, ನಯನಾ ಹಾಗೂ ರಾಣಿ ವೇದಿಕೆಗೆ ಕರೆತಂದರು. ಪರೇಡ್ ಕಮಾಂಡರ್ ಭರತ್ ಗೌಡ ಗೌರವ ಸಲ್ಲಿಸಿದರು. ಧ್ವಜಾರೋಹಣದ ಬಳಿಕ ರಾಷ್ಟ್ರ ಭಕ್ತಿ ಗೀತೆ, ವಂದೇ ಮಾತರಂ ಹಾಗೂ ಕೋಠಿ ಕಂಠೋ ಸೇ...ಯನ್ನು ಸಾಂಸ್ಕೃತಿಕ ತಂಡದ ವಿದ್ಯಾರ್ಥಿಗಳು ಹಾಡಿದರು. ವರ್ಷ ಸಿಂಚನದ ನಡುವೆಯೇ ವಿದ್ಯಾರ್ಥಿಗಳು ದನಿಗೂಡಿಸಿದರು. ಪುಟಾಣಿ ರಾಷ್ಟ್ರಧ್ವಜವನ್ನು ವಿದ್ಯಾರ್ಥಿಗಳು ಹಿಡಿದು ಬೀಸಿದಾಗ, ತ್ರಿವರ್ಣ ಸಿಂಹಗಳು ಹೆಜ್ಜೆ ಹಾಕಿದಾಗ, ಬ್ಲೋವರ್ ಮೂಲಕ ಬಾನೆತ್ತರಕ್ಕೆ ಕೇಸರಿ, ಬಿಳಿ, ಹಸಿರು ವರ್ಣಗಳನ್ನು ಸಿಂಚಿಸಿದಾಗ 'ಸ್ವಾತಂತ್ರ್ಯ ಹಬ್ಬ'ದ ಸಡಗರ ಕಳೆಗಟ್ಟಿತ್ತು. ದೇಶಭಕ್ತಿಯ ಜೊತೆ ಸಂಭ್ರಮ ಕಣ್ತುಂಬಿಕೊಂಡಿತು. ನಂತರ ಅಜಯ್ ವಾರಿಯರ್ ತಂಡದಿಂದ ಸಂಗೀತ ರಸಮಂಜರಿ ಕಠೆಯಕ್ರಮ ಆಯೋಜಿಸಲಾಗಿತ್ತು.




# ಲೆಕ್ಕಪರಿಶೋಧನೆ (ಸಿ.ಎ.) ತರಬೇತಿ: ಆಳ್ವಾಸ್ ಕಲಿಕೆ- ರ್‍ಯಾಂಕ್ ಗಳಿಕೆ

**ಆಳ್ವಾಸ್** ಶಿಕ್ಷಣ ಪ್ರತಿಷ್ಠಾನದ ದತ್ತು ಯೋಜನೆಯಲ್ಲಿ ಪಿಯುಸಿ ಓದಿದ್ದು, 2016ರಲ್ಲಿ ಸಿಪಿಟಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ 2020ರಲ್ಲಿ ಸಿಎ ಅಂತಿಮ ಪರೀಕ್ಷೆಯಲ್ಲಿ ದೇಶಕ್ಕೆ ಹತ್ತನೇ ರ್‍ಯಾಂಕ್ ಗಳಿಸಿದೆ' ಎಂದ ಹಳೆ ವಿದ್ಯಾರ್ಥಿ ಹಾಗೂ 'ಥಿಂಕ್ ವಿಥ್ ತಬಿಶ್' ಸಂಸ್ಥೆಯ ಸ್ಥಾಪಕ ಮತ್ತು ಸಿಇಒ ಸಿಎ ತಬಿಶ್ ಹಸನ್ ಮಾತುಗಳು ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ಮೂಡಿಸಿತು.

ಸಿ. ಎ. ಅಂತಿಮ ಪರೀಕ್ಷೆಯಲ್ಲಿ ತೇರ್ಗಡೆಗೊಂಡ 24 ಹಳೆ ವಿದ್ಯಾರ್ಥಿಗಳು ಹಾಗೂ 2024- 25ನೇ ಸಾಲಿನಲ್ಲಿ ವಾಣಿಜ್ಯ ಮತ್ತು ಕಲಾ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಹಾಗೂ ರ್‍ಯಾಂಕ್ ಗಳಿಸಿದ 19 ವಿದ್ಯಾರ್ಥಿಗಳಿಗೆ ವಾಣಿಜ್ಯ ಸಂಘದ ವತಿಯಿಂದ ಆಗಸ್ಟ್ 30ರಂದು ಹಮ್ಮಿಕೊಂಡ ಸನ್ಮಾನ ಕಾರ್ಯಕ್ರಮದಲ್ಲಿ ತಬಿಶ್ ಮಾತಿನ ಹೊನಲು ಹರಿಸಿದರು. "ಸಾಧಿಸಲು ನಿರ್ದಿಷ್ಟವಾದ ಗುರಿ ಇರಬೇಕು. ಸಾಧಕರೆಲ್ಲರೂ, ಪ್ರತಿಭಾನ್ವಿತರಲ್ಲ. ನಿರ್ದಿಷ್ಟ ಗುರಿಯನ್ನು ಹೊಂದಿ ಯಶಸ್ಸನ್ನು ಕಂಡಿದ್ದಾರೆ. ತಪ್ಪುಗಳು ಸಹಜ. ತಿದ್ದಿ ಬಾಳಿದರೆ ಮಾತ್ರ ಯಶಸ್ಸು. ಕಷ್ಟಪಟ್ಟು ಕೆಲಸ ಮಾಡಲು ಸಿದ್ಧರಿರಬೇಕು' ಎಂದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ ಮಾತನಾಡಿ, "ನಮ್ಮ ಗುರಿ ನಿಶ್ಚಿತವಾಗಿದ್ದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ತಬಿಶ್ ಉದಾಹರಣೆ. ಕಳೆದ ಮೂರು ವರ್ಷದಲ್ಲಿ ಆಳ್ವಾಸ್‌ನ 115ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಿ.ಎ ಅಂತಿಮ ಪರೀಕ್ಷೆಯಲ್ಲಿ ತೇರ್ಗಡೆಗೊಂಡಿದ್ದಾರೆ' ಎಂದು ಶ್ಲಾಘಿಸಿದರು.

ಪ್ರಾಂಶುಪಾಲ ಮೊಹಮ್ಮದ್ ಸದಾಕತ್, ಉಪ ಪ್ರಾಂಶುಪಾಲೆ ಝೂನ್ಸಿ ಪಿ ಎನ್., ವಾಣಿಜ್ಯ ವಿಭಾಗದ ಡೀನ್ ಪ್ರಶಾಂತ್ ಎಂ. ಡಿ. ಹಾಗೂ ಕಲಾ ವಿಭಾಗದ ಡೀನ್ ವೇಣುಗೋಪಾಲ್ ಶೆಟ್ಟಿ ಇದ್ದರು.



For your bright future- contact: admission@alvas.org or visit : www.alvas.org

# ವಿದ್ಯಾರ್ಥಿಗಳ ಮನಸ್ಸು, ಬದುಕಿನ ಯಶಸ್ಸು

## ಬದುಕಿನ ದಾರಿದೀಪ



ಹೊಳೆನರಸೀಪುರದ ಸರ್ಕಾರಿ ಶಾಲೆಯಲ್ಲಿ ಎಸ್ಸೆಸೆಲ್ಸಿಯಲ್ಲಿ 618 ಅಂಕ ಪಡೆದು ತಾಲ್ಲೂಕಿಗೆ ಪ್ರಥಮ ಸ್ಥಾನವನ್ನು ಗಳಿಸಿದೆ. ಮುಂದೆ ನನಗೆ ಡಾಕ್ಟರ್ ಆಗುವ ಕನಸ್ಸಿನೊಂದಿಗೆ ಸಾವಿರಾರು ಆಕಾಂಕ್ಷೆಗಳಿತ್ತು. ಆದರೆ ನನ್ನ ಮುಂದಿನ ಓದಿಗೆ ಹೊರಗಡೆ ಕಾಲೇಜಿಗೆ ಸೇರಲು ನನ್ನ ಪೋಷಕರ ಆರ್ಥಿಕ ಸ್ಥಿತಿ ಸಹಕರಿಸಲಿಲ್ಲ. ಒಂದು ದಿನ ಆಳ್ವಾಸ್ ವಿದ್ಯಾರ್ಥಿ ವೇತನ ಪರೀಕ್ಷೆ ಬಗ್ಗೆ ಗೊತ್ತಾಯಿತು. ಭರವಸೆಯ ಬೆಳಕಂತೆ ಕಂಡಿತು. ಪರೀಕ್ಷೆ ಬರೆದು ಅತಿ ಕಡಿಮೆ ಶುಲ್ಕದಲ್ಲಿ ಸೀಟು ಸಿಕ್ಕಿತು. ಅದನ್ನು ಉಳಿಸಿಕೊಳ್ಳುವ ಜವಾಬ್ದಾರಿ ನನ್ನ ಮೇಲಿದೆ. ಇಲ್ಲಿ ಹಾಸ್ಟೆಲ್ ಸುತ್ತಲಿನ ಪರಿಸರ, ವಾತಾವರಣ ತುಂಬ ಪ್ರಶಾಂತವಾಗಿದೆ. ಇಲ್ಲಿ ಉತ್ತಮ ಕೋಚಿಂಗ್ ಕೊಡುತ್ತಿದ್ದಾರೆ. ಇಲ್ಲಿ ವಿದ್ಯೆಯನ್ನು ಪಡೆಯುತ್ತಿರುವ ನಾನೇ ಧನ್ಯಳು.

ಕೀರ್ತನಾ ವೈ.ಸಿ. II ಪಿ.ಸಿ.ಎಂ.ಬಿ. ಎಸ್‌ಬಿ-1(ವಿಜ್ಞಾನ ವಿಭಾಗ)

## ಕನಸು ನನಸಿನ ಆಳ್ವಾಸ್



'ಕಲಾ ವಿಭಾಗದವರಿಗೆ ಭವಿಷ್ಯದಲ್ಲಿ ಯಾವುದೇ ಅವಕಾಶಗಳಿಲ್ಲ' ಎಂಬ ಮಾತುಗಳು ಹಲವೆಡೆ ಕೇಳಿ ಬಂತು. ಆದರೆ, ನಾನು, ಆಳ್ವಾಸ್ ಕಾಲೇಜಿಗೆ ಪ್ರವೇಶ ಮಾಡಿದಾಗ ನನ್ನ ಉಪನ್ಯಾಸಕರು, 'ಕಲಾ ವಿಭಾಗದ ವಿದ್ಯಾರ್ಥಿನಿ ಎಂದು ಹೇಳಲು ಹೆಮ್ಮೆ ಪಡು, ಏಕೆಂದರೆ ನೀನು ಯಾವುದೇ ಕಟ್ಟಡವನ್ನು ಕಟ್ಟುವವಳಲ್ಲ ಬದಲಾಗಿ ದೇಶವನ್ನು ಕಟ್ಟುವವಳು ಎಂದು ಹುರಿದುಂಬಿಸಿದ್ದರು. ಆಳ್ವಾಸ್‌ನಲ್ಲಿ ಸಿಕ್ಕಿದ ಪ್ರೋತ್ಸಾಹ, ಧೈರ್ಯವು ನನಗೆ ಬಹಳ ಖುಷಿ ತಂದುಕೊಟ್ಟಿದೆ. ಮನೆ ಮತ್ತು ಆಳ್ವಾಸ್ ವಸತಿನಿಲಯಕ್ಕೆ ಯಾವುದೇ ವ್ಯತ್ಯಾಸ ಕಾಣುವುದಿಲ್ಲ. ಮೊಬೈಲ್ ಬಯಸುತ್ತಿದ್ದ ನಾನು ದಿನಪತ್ರಿಕೆಗಳನ್ನು ಓದುವಷ್ಟು ಬದಲಾಗಿದ್ದೇನೆ. ಗುರಿಯ ಜೊತೆಗೆ ತಿಳುವಳಿಕೆಯೂ ಹೆಚ್ಚಿದೆ ಮತ್ತು ಸ್ಪಷ್ಟತೆ ಬಂದಿದೆ.

- ಅನನ್ಯ ಎಮ್ ಆರ್

II ಹೆಚ್.ಇ.ಪಿ.ಎಸ್. (ಕಲಾ ವಿಭಾಗ)

## ನನ್ನ ಕನಸಿನ ದೋಣಿ



ಆಳ್ವಾಸ್ ಸಂಸ್ಥೆಯ ವಿದ್ಯಾರ್ಥಿ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆಯಾಗುತ್ತದೆ. ನನಗೆ ಪಾಠದ ಜೊತೆಗೆ ಇನ್ನು ಹಲವು ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡಿದೆ. ಇಲ್ಲಿನ ಶಿಕ್ಷಕ ವೃಂದದವರು ತಮ್ಮ ಮಗನಂತೆ ಆಸ್ಥೆಯಿಂದ ನೋಡಿಕೊಳ್ಳುತ್ತಿದ್ದಾರೆ. ಶೈಕ್ಷಣಿಕ, ಭಾವನಾತ್ಮಕ ಹಾಗೂ ಇತರ ಯಾವುದೇ ವಿಷಯಗಳಲ್ಲಿರುವ ನನ್ನ ಸಮಸ್ಯೆಗಳನ್ನು ಪರಿಹರಿಸಲು ಸದಾ ಸಹಕರಿಸುತ್ತಾರೆ. ಕ್ರೀಡಾ ಕ್ಷೇತ್ರದಲ್ಲಿ ಇದ್ದುಕೊಂಡೇ, ಚಾರ್ಟರ್ಡ್ ಅಕೌಂಟೆಂಟ್ ಆಗುವ ಕನಸನ್ನು ಈಡೇರಿಸಲು ಬೇಕಾದ ಪರಿಪೂರ್ಣ ತರಬೇತಿಯನ್ನು ಆಳ್ವಾಸ್ ನೀಡುತ್ತಿದೆ.

- ಮೋಹಿತ್ ಗೌಡ ಆರ್‌ಎ.ಸ್

II ಬಿ.ಎ.ಇ. ಬಿಎಮ್ (ವಾಣಿಜ್ಯ ವಿಭಾಗ)

## Approach to education has been encouraging



Alva's faculty members are supportive and knowledgeable, making learning a rewarding experience. The institution's innovative approach to education has been truly encouraging, and its holistic environment has contributed to my personal growth. The nurturing atmosphere on campus has allowed me to explore my interests and develop my skills. I also appreciate the institution's emphasis on extracurricular activities, which has helped me become a well-rounded individual.

-Tanushree SB

(In Film Land) studied from 6th to 12th standard in Alva's.

## ಸ್ವರೂಪ ಪ್ರಜ್ಞೆಯನ್ನು ಜಾಗೃತಗೊಳಿಸಿದ ಆಳ್ವಾಸ್



ಆಳ್ವಾಸ್ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಉಚಿತ ಶಿಕ್ಷಣ ಪಡೆದು ವೈದ್ಯಕೀಯ ಸೀಟು ಪಡೆದು, ಪಿ.ಜಿ.( MS Ortho) ಸೀಟು ಪಡೆದು ತುಮಕೂರು ಜಿಲ್ಲೆ ತಿಪಟೂರು ಹೆಲ್ತ್ ಸೆಂಟರ್‌ನಲ್ಲಿ ಕೀಲು ಮತ್ತು ಮೂಳೆ ಶಸ್ತ್ರಚಿಕಿತ್ಸಾ ತಜ್ಞರಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನನ್ನನ್ನು ರೂಪಿಸಿದ್ದು ಆಳ್ವಾಸ್ ಕಾಲೇಜು. ಶ್ರೇಷ್ಠ ಶಿಕ್ಷಕರಿಂದ ಜ್ಞಾನವನ್ನು ಪಡೆದ ನೆನಪು, ತರಗತಿಗೇ ಹೆಚ್ಚು ಅಂಕ ಪಡೆದು ಖುಷಿ ಪಟ್ಟ ನೆನಪುಗಳೆಲ್ಲ ನನ್ನ ಜೀವನದ ಮರೆಯಲಾಗದ ಮೈಲಿಗಲ್ಲು. ನನ್ನ ಸ್ವರೂಪ ಪ್ರಜ್ಞೆಯ ಜಾಗೃತಿಯನ್ನು ಆಳ್ವಾಸ್ ರೂಪಿಸಿತು.

-ಡಾ| ಶಶಾಂಕ್ ಎಸ್,

MBBS. MS(Ortho) Dipin FM (FIFA)

## ವೃತ್ತಿ ಪರತೆ, ವ್ಯಕ್ತಿತ್ವ ರೂಪಿಸಿದ ಆಳ್ವಾಸ್



ಆಳ್ವಾಸ್ ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ಉಚಿತ ಶಿಕ್ಷಣ ಪಡೆದು, ವೈದ್ಯಕೀಯ ರಂಗ ಪ್ರವೇಶ ಪಡೆದು, ಬೆಳಗಾವಿ ಜಿಲ್ಲೆಯ ಹಾರೂಗೇರಿ ಪಟ್ಟಣದಲ್ಲಿ, 30 ಹಾಸಿಗೆಯ ಸ್ವಂತ ಆಸ್ಪತ್ರೆ ಆರಂಭಿಸಿ, ಸೇವೆ ಸಲ್ಲಿಸುತ್ತಿದ್ದೇನೆ. ನಾನು ನನ್ನ ಕಾಲೇಜು ದಿನಗಳನ್ನು ಹಿಂತಿರುಗಿ ನೋಡಿದಾಗ ಹೆಮ್ಮೆಯೆನಿಸುತ್ತದೆ. ನನ್ನ ಕನಸುಗಳ ಸಾಕಾರಕ್ಕೆ ಹೆಗಲೆಣೆಯಾದದ್ದು ಮತ್ತು ಅದನ್ನು ರೂಪಿಸಿದ್ದು ಆಳ್ವಾಸ್ ಕಾಲೇಜು. ಜೀವನದಲ್ಲಿ ಪಾಠದ ಜೊತೆ ಶಿಸ್ತಿನ ಸಿಪಾಯಿಯಂತೆ ಬದುಕಲು ಕಲಿಸಿದ್ದು ಆಳ್ವಾಸ್. ಆತ್ಮ ವಿಶ್ವಾಸ ತುಂಬಿದ್ದು ಆಳ್ವಾಸ್. ಹೆಚ್ಚು ಸಹಾನುಭೂತಿಯುಳ್ಳ ಹಾಗೂ ಸುಸಂಘಟಿತ ವ್ಯಕ್ತಿಯಾಗಲು ಸಹಾಯ ಮಾಡಿದ್ದು ನನ್ನ ಆಳ್ವಾಸ್. ಕಲಿತ ಪಾಠಗಳು, ರೂಪಿಸಿದ ಸಂಬಂಧಗಳು ಹಾಗೂ ಸೃಜಿಸುವ ನೆನಪುಗಳು ನನಗೆ ಸ್ಫೂರ್ತಿ ಮತ್ತು ಪ್ರೇರಣೆ ನೀಡುತ್ತಲೇ ಇವೆ.

- ಡಾ.ಯಲ್ಲಾಲಿಂಗ ಸನ್ನಸನ್ನಿ, MBBS

# INNOCENT INGENUITY

At the beginning of the 2025–2026 academic year, Alva's School conducted various programmes aimed at uplifting students' calibre and promoting their overall development.

## Krishna Janmashtami

On 14th August, Alva's English Medium Primary School celebrated Shree Krishna Janmastami festival in a splendid way. The celebration expanse of Janmastami was colourful with rangoli, flowers and painted pots. The celebration began with a prayer song. AEF Managing trustee Vivek Alva, AAO Rajesh Shetty, Headmistress Ranjika Rai, AO Nithesh inaugurated the ceremony by lighting the lamp. Vivek Alva said, 'We should embrace the ideals of Lord Krishna' and motivated both students and teachers towards new innovations. Programme was hosted by Bhavin, Srisha Shetty and Inchara from 5th standard. The ceremony was included Radha Krishna's dances, Tiger dance, Breaking the pot etc.






## ಮಕ್ಕಳೊಂದಿಗೆ ಮೊಸರು ಕುಡಿಕೆ

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆಳ್ವಾಸ್ ಕಿಂಡರ್ ಗಾರ್ಡನ್, ಸಿ. ಬಿ. ಎಸ್. ಇ ಮತ್ತು ಐ. ಸಿ. ಎಸ್. ಇ ಶಾಲೆಗಳ ಆಶ್ರಯದಲ್ಲಿ ಆನಂದ ಸ್ವರೂಪದ ಸಭಾ ಭವನದಲ್ಲಿ ಕೃಷ್ಣಾಷ್ಟಮಿ- ಮೊಸರು ಕುಡಿಕೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಮಡಿಕೆ ಒಡೆಯುವ ಮೂಲಕ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ ಕಾರ್ಯಕ್ರಮ ಉದ್ಘಾಟಿಸಿದರು. ದೀಪ ಬೆಳಗಿದರು. 'ಮಕ್ಕಳು ಮಕ್ಕಳಂತೆಯೇ ಇರಬೇಕು. ಬಾಲ್ಯದ ಚೇಷ್ಟೆಗಳು ಅವರ ಸೃಜನಶೀಲತೆಯ ಪ್ರತೀಕ. ಇದು ನಮ್ಮ ಧಾರ್ಮಿಕ ಆಚರಣೆಯಲ್ಲಿಯೇ ಬೇರೂರಿದೆ. ಈ ಆಚರಣೆಗಳು ನಮ್ಮ ಸಂಸ್ಕೃತಿ ಅರಿಯಲು ಸಹಕಾರಿ. ಸಾಧಕರ ಕತೆಗಳ ಮೂಲಕ ಬದುಕಿನಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಾಧ್ಯ' ಎಂದರು. ಶಾಲಾ ಆಡಳಿತ, ಬೋಧಕ, ಬೋಧಕೇತರ ಸಿಬ್ಬಂದಿ ಇದ್ದರು.

## Talents' day

Alva's English Medium High School celebrated the 'Talents Day' on 23rd June 2025 with the motto 'Bring out the innate talents of the students' at Krishisiri Vedike.

Alva's schools A.O. Preetham Kunder inaugurated the function and Anvitha of 10thstd hosted the stage event. Shadvi of 10thstd welcomed the gathering. Vijaya T Murthyand Uma Rufus were present.



Students took active participation in cultural programme with unique theme and made the audience spellbound.

The two unique events conducted were the epic scene from the Mahabharata, - "DraupadiVastraharan", and drama reflecting the love for green with leading role of 'SaalumaradaThimmakka'.

The programme ended with vote of thanks. The programme went on well and made memorable.




## Environment Day

Alva's Central School celebrated 'Environmental Day -Vanamahotsava' On 28th June 2025, with great enthusiasm. The students carried the spirit of nature by bringing delightful 'green' food, adding freshness to the day. The campus came alive with creativity and eco-friendly activities.




## Talent meets opportunity: Village to Vacancies

# Journey of Alva's Pragati

## Details of the Placement drives

### Alva's Pragati

| Edition | Year | Companies participated | Spot offers | Shortlists |
|---|---|---|---|---|
| 1 | 2007 | 35 | 72 | 368 |
| 2 | 2010 | 98 | 202 | 787 |
| 3 | 2011 | 143 | 356 | 1495 |
| 4 | 2012 | 158 | 394 | 1578 |
| 5 | 2013 | 172 | 541 | 1659 |
| 6 | 2014 | 216 | 976 | 2788 |
| 7 | 2015 | 272 | 1109 | 4,416 |
| 8 | 2016 | 309 | 1209 | 4744 |
| 9 | 2017 | 208 | 1058 | 2918 |
| 10 | 2018 | 183 | 1326 | 3947 |
| 11 | 2019 | 208 | 1712 | 3697 |
| 12 | 2022 | 222 | 1346 | 3118 |
| 13 | 2023 | 198 | 1871 | 3259 |
| 14 | 2024 | 258 | 2468 | 5953 |
| 15 | 2025 | 288 | 2873 | 3734 |

Alva's Pragati is a mega placement drive organized by Alva's Education Foundation as a CSR activity. The objective of the event is to facilitate job opportunities, especially in rural and underprivileged parts of the country. Alva's Pragati features the participation of top recruiters representing major sectors such as IT, ITeS, Manufacturing, Healthcare and Pharma, Sales and Retail, Automobile, Banking and Finance, Hospitality, Education, Media and NGO. These sectors offer a large number of openings for Graduates and Post Graduates in various streams such as Medical and Para-Medical, Engineering, Arts, Commerce & Management, Basic Sciences, Nursing, ITI, Diploma, skilled manpower with PUC & SSLC and other qualifications. It is absolutely free of cost for Job aspirants and participating companies alike. Located in the rural town of Moodubidire, Dakshina Kannada. Alva's Pragati aids thousands of Youth to seek the right employment for them. Though located in rural areas, companies visiting the drive offer jobs located in Bengaluru, Mumbai, Chennai, Pune, Mangaluru, Hubballi and other regions of Karnataka.

The participating companies' details will be updated on real-time basis at www.alvaspragati.com and candidates are insisted on visiting the site at regular intervals. Online registration is compulsory for job aspirants to streamline and digitize the entire recruitment/selection process. Moreover, the expert team of Alva's will be providing orientation to students in various places regarding the job description and scope of the Job. Including all the placement drives organized by Alva's so far, the number of candidates who received **spot offers is 36151** and the number of candidates shortlisted by the companies is **61517.**

## Placement Drives outside the campus

| Sl. no | Name of the event | Year | Companies participated | Venue | Spot offers | Short-lists |
|---|---|---|---|---|---|---|
| 1 | Chikkaballapur Udyoga Mela | 2011 | 172 | Chikkaballpur | 523 | 3482 |
| 2 | Chikkaballapur Udyoga Mela | 2013 | 277 | SJCIT, Chikkaballapura | 572 | 9196 |
| 3 | Mangaluru Udyoga Mela | 2015 | 223 | Benjanapadav, Mangalore | 655 | 3200 |
| 4 | Alva's Udyogasiri | 2017 | 71 | Alva's College, Vidyagiri, Moodbidri | 216 | 838 |
| 5 | Disha Career Fest (Mangalore Udyoga Mela) | 2018 | 130 | Mangalore University campus, Magalore | 331 | 1718 |
| 6 | Chikkaballpur Udyoga Mela | 2018 | 104 | Chikkaballpur | 457 | 1393 |
| 7 | Shramika Udyoga Mela | 2022 | 73 | Sacred Hearts, Belthangady | 301 | 963 |

***Venue:** Alva's College, Vidyagiri, Moodbidri

### Highlights of Alva's Pragati

- Equal preference to white, blue and pink collar jobs.
- Diverse sectors like BFSI, IT, ITes, Manufacturing, Sales and Retail, Hospitality, Telecommunication, Health, Media, Construction, Education and NGO are covered.
- Gulf Multinational companies participate in the drive and offer job overseas.
- Some companies offer special recruitment for candidates from underprivileged sections of society.
- Clarity walls will be installed for the benefits of candidates
- Because of the prior registration, all information about companies will be known to the candidates.
- Employability enhancement center helps to channelize students to the companies most suited to them.
- Series of orientations before the event to prepare candidates for the interview
- Booklet of all companies, requirements, packages they offer and number of candidates required.
- Free accommodation for outstation students.
- Bus Facility for students of ITI and Diploma.

Because of its expertise in organizing placement drives, Alva's Education Foundation has collaborated with Government and social organizations to host Udyoga Melas.



## *Alva's Pragati 2025: Empowering youth for Inclusive growth*

From page 1

More than a thousand volunteers were deployed, and help desks were set up at various points. In addition, through an announcement centre functioning like a helpline, announcers provided real-time updates. Information Handbook: An information handbook, designed by categorizing companies' sector-wise, served as a valuable guide for candidates. It contained details such as the company name, total number of vacancies, job titles, required qualifications, package, experience, job location, and the interview room number. This handbook was distributed to all candidates, enabling them to choose companies as per their eligibility.

In line with the selection criteria of each company, transparent processes were conducted by themselves. The list of candidates who were offered on-the-spot appointments was announced on the evening of the second day of Pragati. The names of those shortlisted for the final round were published on the official website.

Inauguration: District In-charge Minister and Minister of Health and Family Welfare Dinesh Gundu Rao inaugurated the drive at Dr. V. S. Acharya Auditorium on August 1st.

Former Minister Ramanath Rai launched a new AI-based application developed to support job-seekers attending the fair, helping match candidates with suitable job roles to their qualifications. AEF Chairman Dr. M. Mohan Alva, Managing Trustee Vivek Alva and leading business tycoons and experts from various fields were present on the occasion.

## Shining Bright

From page 1

This success reflects their command over complex subjects like Accounting and Financial Management, bolstered by the college's specialized CA coaching program. Faculty focus on conceptual clarity, coupled with regular practice and doubt-resolution sessions, prepared students to conquer the demanding curriculum, opening doors to prestigious careers in finance and auditing.

In NATA 2025, 19 of Alva's students cleared the exam at the All-India level, demonstrating exceptional skills in drawing, observation, and aesthetic sensitivity.

Furthermore, in the KCET Architecture State exam 2025-2025, 10 students secured state ranks from 13th to 260th, confirming admissions to B.E. (Architecture) courses in Karnataka's engineering colleges. Alva's dedicated NATA coaching, encompassing hands-on drawing practice, mock tests, and portfolio guidance, enabled students to merge creativity with technical precision, cementing their success in this competitive domain. These triumphs in NEET, CA, and NATA are more than mere statistics; they embody Alva's ethos of excellence, perseverance, and innovation. The college's cutting-edge facilities, seasoned faculty, and student-centric approach create an environment where dreams are nurtured and realized. As we celebrate these milestones, Alva's remains committed to inspiring future generations to aim higher, achieve greater, and continue shining bright in their academic and professional pursuits.

# ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ, ಉಪನ್ಯಾಸ, ಮಾರ್ಗದರ್ಶನ



**ಮೂಡುಬಿದಿರೆ:** ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಶಿಕ್ಷಣ ನೀಡುತ್ತಾ ಬಂದಿರುವ ಆಳ್ವಾಸ್ ಪದವಿ ಪೂರ್ವ ಕಾಲೇಜಿನಲ್ಲಿ 2025-26ನೇ ಶೈಕ್ಷಣಿಕ ವರ್ಷದ ಆರಂಭದಲ್ಲೂ ವಿವಿಧ ಪಠ್ಯ ಹಾಗೂ ಪಠ್ಯ ಪೂರಕ ಚಟುವಟಿಕೆಗಳು ನಡೆದವು.

**ನಾಟಾ ತರಬೇತಿ:** ಬ್ಯಾಚುರಲ್ ಆಫ್ ಆರ್ಕಿಟೆಕ್ಚರ್ ಪದವಿ ಶಿಕ್ಷಣಕ್ಕೆ ಪ್ರವೇಶಾತಿಯ ಸಲುವಾಗಿ ನಡೆಯುವ ರಾಷ್ಟ್ರೀಯ ಮಟ್ಟದ ಯೋಗ್ಯತಾ ಪರೀಕ್ಷೆಗೆ (NATA) ‘ವಿದ್ಯಾರ್ಥಿ ಮಾಹಿತಿ ಮಾರ್ಗದರ್ಶನ ಕಾರ್ಯಕ್ರಮ’ ಆಗಸ್ಟ್ 22 ರಂದು ಜರಗಿತು.

ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಟೆಕ್ಚರ್ ಸ್ಥಾಪಕ ನಿರ್ದೇಶಕ ಪ್ರೊ. ವಿನೋದ್ ಆರಾಹ್ನ ಮತ್ತು ಪ್ರಾಧ್ಯಾಪಕಿ ನಿಕಿತ ಮಾಕಸನ ಉಪನ್ಯಾಸ ನೀಡಿದರು. ನಾಟಾ ಸಂಯೋಜಕ ಗೌತಮ್ ಇದ್ದರು. ಡಾ. ಸುಧಾರಾಣಿ ನಿರೂಪಿಸಿದರು.

**ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿ:** ಜೆ ಇ ಇ, ನೀಟ್, ಎನ್ ಡಿಎ ಮತ್ತು ಸಿಇಟಿ ಮಾತ್ರವಲ್ಲದೇ ಇತರ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಜಾಗೃತಿ ಮೂಡಿಸುವ “ರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿ” ಕಾರ್ಯಕ್ರಮ ಸೆಪ್ಟೆಂಬರ್ 05 ರಂದು ನಡೆಯಿತು.





ಬೆಂಗಳೂರಿನ ಐಐಎಸ್‌ಸಿಯ ಸಂಶೋಧನಾ ವಿದ್ವಾಂಸ ಸಕ್ಷಮ್ ಜೈನ್ ಮತ್ತು ಕಾವ್ಯಾ ಅವರು CAT, BITSAT, UCEED, VITEEE, NIFT, ICAR, NEST, IAT, IMAT, COMEDK, NFAT ಮತ್ತು ಇತರ ರಾಜ್ಯ ಮಟ್ಟದ ಪ್ರವೇಶ ಪರೀಕ್ಷೆಗಳ ಬಗ್ಗೆ ಮಾಹಿತಿ ಒದಗಿಸಿದರು. ಕಾರ್ಯಕ್ರಮ ಸಂಯೋಜಕಿ ಶ್ರೀಮತಿ ರಮ್ಯಾ ರೈ ಇದ್ದರು.

**ಪ್ರೇರಣಾ ಉಪನ್ಯಾಸ:** ‘ನಿಜ ಎಂದು ತೋರುವ ಸುಳ್ಳು ಪುರಾವೆಗಳೇ ಭಯ’ ಎಂದು ಡಾ.ರಾಜ್‌ದೀಪ್ ಮನ್ವಾನಿ ಹೇಳಿದರು. ಕಾಲೇಜಿನಲ್ಲಿ ಈಚೆಗೆ ‘ಪ್ರೇರಣಾ ಉಪನ್ಯಾಸ’ ನೀಡಿದ ಅವರು, ‘ಸ್ಥೈರ್ಯ, ಆತ್ಮವಿಶ್ವಾಸ ಹಾಗೂ ದೃಢಸಂಕಲ್ಪವು ಯಶಸ್ಸಿನ ಕೀಲಿಕೈಗಳು’ ಎಂದರು. ಉಪನ್ಯಾಸಕಿ ರುಚಿಕಾ ಸಹಕರಿಸಿದರು. ಮೈತ್ರಿ ರೈ ನಿರೂಪಿಸಿದರು.

ಬ್ಯಾಚುರಲ್ ಆಫ್ ಆರ್ಕಿಟೆಕ್ಚರ್ ಪದವಿ ಶಿಕ್ಷಣ ಪ್ರವೇಶಾತಿಯ ಸಲುವಾಗಿ ನಡೆಯುವ ರಾಷ್ಟ್ರೀಯ ಮಟ್ಟದ ಯೋಗ್ಯತಾ ಪರೀಕ್ಷೆಗೆ ವಿದ್ಯಾರ್ಥಿ ಮಾಹಿತಿ ಮಾರ್ಗದರ್ಶನ ಕಾರ್ಯಕ್ರಮ ಕಾಲೇಜಿನ ವಿ.ಎಸ್.ಆಚಾರ್ಯ ಸಭಾಭವನದಲ್ಲಿ ಆ. 22 ರಂದು ಜರುಗಿತು.

**‘ಕನ್ನಡ ಇಲ್ಲದಿದ್ದರೆ ಬಡತನ’:** 'ನಾನು ಕನ್ನಡ ಸಾಹಿತ್ಯವನ್ನು ಪ್ರೀತಿಸದಿದ್ದರೆ, ಇಂದಿಗೂ ಬಡತನದ ವ್ಯವಸ್ಥೆಯಲ್ಲೇ ಬದುಕಬೇಕಾಗುತ್ತಿತ್ತು' ಎಂದು ಕವಿ, ವಿಮರ್ಶಕ ಹಾಗೂ ಬೆಂಗಳೂರು ಕೆ.ಆರ್.ಪುರಂ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ. ಟಿ. ಯಲ್ಲಪ್ಪ ಹೇಳಿದರು.

ಕಾಲೇಜಿನ ಸಾಹಿತ್ಯ ಸಂಘದ ಆಶ್ರಯದಲ್ಲಿ ಈಚೆಗೆ ನಡೆದ 'ವಿಶೇಷ ಉಪನ್ಯಾಸ ಮತ್ತು ಕವಿಯೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಅವರು ತಮ್ಮ ‘ಬುತ್ತಿ’ – ಹಸಿವು ನೀಗಿಸುವ ಯೋಜನೆ ಕುರಿತು ವಿವರಿಸಿದರು.



ಕಲಾವಿಭಾಗದ ಡೀನ್ ವೇಣುಗೋಪಾಲ ಶೆಟ್ಟಿ, 'ಆಳ್ವಾಸ್ ಸಂಸ್ಥೆಯ ವಾತಾವರಣವೇ ಸಾಹಿತ್ಯಾಭಿರುಚಿ ಬೆಳೆಸಲು ಸಹಾಯಕವಾಗಿದೆ' ಎಂದರು. ಸಂಘದ ಸಂಯೋಜಕ ಡಾ. ಡಿ.ವಿ. ಪ್ರಕಾಶ್, ಉಷಾ ಬಿ., ವೇದಾವತಿ ಇದ್ದರು.

**ಕಲಾಸಂಘ, ಸಾಹಿತ್ಯ ಸಂಘ:** ‘ತಂದೆ-ತಾಯಿಯ ಕಷ್ಟ ಅರಿತು, ಶಿಕ್ಷಕರ ಮಾರ್ಗದರ್ಶನದೊಂದಿಗೆ ಭವಿಷ್ಯವನ್ನ ರೂಪಿಸಿಕೊಳ್ಳಿ’ ಎಂದು ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ಜೀವನ್ ರಾಂ ಸುಳ್ಯ ನುಡಿದರು.

ಶಿವರಾಮ ಕಾರಂತ ವೇದಿಕೆಯಲ್ಲಿ ಈಚೆಗೆ ನಡೆದ ಕಾಲೇಜಿನ ಕಲಾಸಂಘ, ಸಾಹಿತ್ಯ ಸಂಘ ಮತ್ತು ಮತದಾರರ ಸಾಕ್ಷರತಾ ಸಂಘಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಲಾವಿಭಾಗದ ಡೀನ್ ವೇಣುಗೋಪಾಲ್ ಶೆಟ್ಟಿ, ಸಂಯೋಜಕರುಗಳಾದ ದಾಮೋದರ್, ಸುನಿಲ್ ಹಾಗೂ ಶ್ವೇತಶ್ರೀ ಇದ್ದರು. ವಿದ್ಯಾರ್ಥಿ ಹೇಮಂತ್ ನಿರೂಪಿಸಿದರು. ಜ್ಯೋತಿ ಸ್ವಾಗತಿಸಿ ಅನನ್ಯ ವಂದಿಸಿದರು.

ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಪ್ರಾಂಶುಪಾಲ ಪ್ರೊ. ಮೊಹಮ್ಮದ್ ಸದಾಕತ್ ಹಾಗೂ ಉಪಪ್ರಾಂಶುಪಾಲೆ ಝಾನ್ಸಿ ಪಿ.ಎನ್. ಸಂಘಟಕರು ಹಾಗೂ ಉಪನ್ಯಾಸಕರನ್ನು ಪ್ರೋತ್ಸಾಹಿಸಿದರು.



## Orientation on Entrepreneurship

Alva’s PU College organized Orientation on ‘Entrepreneurship, Mindfulness, and Wellbeing’ at Dr. V.S. Acharya Auditorium, by Dasila, DIG, Indian Coastal Guard Mangalore.
Dasila, urged students to become job creators rather than job seekers, highlighting the need for entrepreneurial thinking.
Vivek Alva, Trustee of Alva’s Education Foundation, presided over the function.
Principal and Vice prinicipal were present. Velita D’Souza as the MC.

# ಸ್ಫೂರ್ತಿ ನೀಡಿದ ಪಠ್ಯ ಪೂರಕ ಚಟುವಟಿಕೆ

## ಪ್ರಮುಖ ಕಾರ್ಯಕ್ರಮಗಳ ಇಣುಕು ನೋಟ

**ವಿದ್ಯಾರ್ಥಿ, ಪಾಲಕ, ಶಿಕ್ಷಕರ ಸಭೆ:** ಈ ವರ್ಷ ಪ್ರಥಮ ಪಿಯುಸಿಗೆ ಸೇರಿದ ವಿದ್ಯಾರ್ಥಿಗಳು ಹಾಗೂ ಅವರ ಪಾಲಕರ ಸಭೆಗಳು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ| ಎಂ.ಮೋಹನ ಆಳ್ವ ಅಧ್ಯಕ್ಷತೆಯಲ್ಲಿ ತಂಡ ತಂಡವಾಗಿ ಮೇ 28 ರಿಂದ ಜೂನ್ 09 ರ ವರೆಗೆ ನಡೆಯಿತು. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೂ ಸಭೆ ನಡೆಸಿ ಮಾರ್ಗದರ್ಶನ ನೀಡಲಾಯಿತು.

**ವೃತ್ತಿಪರ ಶಿಷ್ಟಾಚಾರ:** `ಆಳ್ವಾಸ್ ಸಕ್ಷಮ’- ಮಹಿಳಾ ವೇದಿಕೆ ಆಶ್ರಯದಲ್ಲಿ `ವೃತ್ತಿಪರ ಶಿಷ್ಟಾಚಾರ’ ಬಗ್ಗೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಹೊಟೇಲ್ ಮ್ಯಾನೇಜ್ಮೆಂಟ್ ತಜ್ಞರಾದ ಡಾ.ಮಾತಾರಾಣಿ ಮಥಾಯಿಸ್ ಮಾತನಾಡಿ, ‘ನೀವು ನಿಮ್ಮ ಮಾತುಗಳಿಂದ ಸನ್ಮಾರ್ಗದ ಮಾದರಿಯನ್ನು ರೂಪಿಸಬಹುದು’ ಎಂದರು. .

**ತಾಯಂದಿರ ದಿನ:** ತಾಯಂದಿರ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ವಿವಿಧ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಸಕ್ಷಮ ಸಂಯೋಜಕಿ ಡಾ| ಗ್ರೀಷ್ಮಾ ವಿವೇಕ್ ಆಳ್ವ, ಅಧ್ಯಕ್ಷೆ ಡಾ.ಅರ್ಚನಾ ಪ್ರಭಾತ್ ಇದ್ದರು. ಮಹಿಳಾ ಕ್ಷೇಮಪಾಲನಾ ಸಮಿತಿ ಮತ್ತು ಆಂತರಿಕ ಸಮಿತಿಯನ್ನು ಆಗಸ್ಟ್ 19ರಂದು ಗ್ರೀಷ್ಮಾ ಆಳ್ವ ಉದ್ಘಾಟಿಸಿದರು.

**ಸೇನಾ ಸ್ಫೂರ್ತಿ:** ಸೇನೆಗೆ ಸೇರ ಬಯಸುವ ವಿದ್ಯಾರ್ಥಿಗಳಿಗಾಗಿ ಜುಲೈ 24 ರಂದು ಅಭಿವಿನ್ಯಾಸ ಕಾರ್ಯಕ್ರಮವನ್ನು ವೈದ್ಯ ಮತ್ತು ಅಂಕಣಕಾರ ಮೇಜರ್ ಡಾ| ಖುಷವಂತ ಕೋಳಿಬೈಲು ಮಾರ್ಗದರ್ಶನ ನೀಡಿದರು.



**ದುಶ್ಚಟ ಮುಕ್ತ ಆವರಣ:** ದುಶ್ಚಟಗಳಿಂದ ದೂರವಿರುವ ಕುರಿತ ‘ಕಾನೂನಿನ ಅರಿವು’ ಕಾರ್ಯಕ್ರಮವನ್ನು ‘ವಿಶ್ವ ತಂಬಾಕುರಹಿತ ದಿನದ ಅಂಗವಾಗಿ’ ಮಾದಕ ವ್ಯಸನ ಜಾಗೃತಿ ಸಮಿತಿ ಆಯೋಜಿಸಿತ್ತು ಪೊಲೀಸ್ ವೃತ್ತ ನಿರೀಕ್ಷಕ ಸಂದೇಶ್ ಪಿ.ಜಿ ಮತ್ತು ಪೋಲಿಸ್ ಉಪ ನಿರೀಕ್ಷಕ ಪ್ರತಿಭಾ ಮಾಹಿತಿ ನೀಡಿದರು.

**ರಾಷ್ಟ್ರೀಯ ಸೇವಾ ಯೋಜನೆ:** 2025-26ನೇ ಶೈಕ್ಷಣಿಕ ವರ್ಷದ ರಾಷ್ಟ್ರೀಯ ಸೇವಾ ಯೋಜನೆಯ ಚಟುವಟಿಕೆಗಳನ್ನು ಜುಲೈ 25 ರಂದು ಉದ್ಘಾಟಿಸಲಾಯಿತು. ಸಹ ಪ್ರಾಧ್ಯಾಪಕ ಡಾ| ಸುದರ್ಶನ್ ಪಿ. ಮಾತನಾಡಿ, “ರಾಷ್ಟ್ರೀಯ ಸೇವಾ ಯೋಜನೆಯು ನಮ್ಮ ಜೀವನದ ಪಥವನ್ನೇ ಬದಲಿಸಿ ಪರಿವರ್ತನೆ ತರುತ್ತದೆ” ಎಂದರು.

ರಾ. ಸೇ. ಯೋ. ವತಿಯಿಂದ ಆ.28 ರಂದು ಕಾರ್ಯಾಗಾರ ನಡೆಯಿತು. ಡಾ. ಶಿವರಾಮ ಕಾರಂತ ಟ್ರಸ್ಟ್ ಅಧ್ಯಕ್ಷ ಡಾ. ಗಣನಾಥ ಶೆಟ್ಟಿ ಎಕ್ಕಾರು ಮಾತನಾಡಿ, ‘ಸಾಮಾಜಿಕ ನ್ಯಾಯದ ಅಗತ್ಯ ಯಾರಿಗೆ ಇದೆಯೋ ಅವರಿಗೆ ಸಹಾಯ ಮಾಡಬೇಕು ಎಂದರು. ಕನ್ನಡ ಉಪನ್ಯಾಸಕ ಧರ್ಮೇಂದ್ರ ಕುದ್ರೋಳಿ ಅಧ್ಯಕ್ಷತೆ ವಹಿಸಿದ್ದರು. ಸಂಯೋಜನಾಧಿಕಾರಿ ಮೇಘನಾ ಇದ್ದರು.

**ರೋವರ್ಸ್ ಮತ್ತು ರೇಂಜರ್ಸ್ :** ರೋವರ್ಸ್ ಮತ್ತು ರೇಂಜರ್ಸ್ ಘಟಕದ 2025-26 ನೇ ಸಾಲಿನ ಚಟುವಟಿಕೆಯನ್ನು ಜುಲೈ 3 ರಂದು ಕಾಲೇಜಿನ ಆವರಣದಲ್ಲಿ ಹಳೆಯಂಗಡಿಯ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ದಿನಕರ್ ಕೆ. ಉದ್ಘಾಟಿಸಿ, ‘ವಿದ್ಯಾರ್ಥಿಗಳಿಗೆ ಸ್ವಯಂ ಶಿಸ್ತು ಮತ್ತು ಆತ್ಮ ವಿಶ್ವಾಸವನ್ನು ಹೆಚ್ಚಿಸಬಹುದು. ಸ್ಕೌಟಿಂಗ್ ಅಂದರೆ ಔಟಿಂಗ್ ಎಂದರ್ಥ’ ಎಂದರು. ಸಂಯೋಜಕ ಸುನಿಲ್ ಪ್ರತಿಜ್ಞಾವಿಧಿ ಬೋಧಿಸಿದರು. ವಿದ್ಯಾರ್ಥಿಗಳು ಕಿರು ಪ್ರಹಸನವನ್ನು ನಡೆಸಿಕೊಟ್ಟರು. ವಾಣಿಜ್ಯ ವಿಭಾಗದ ಡೀನ್ ಪ್ರಶಾಂತ್ ಎಂ. ಡಿ, ಘಟಕದ ಸಂಯೋಜಕರಾದ ವೀಣಾ ಆಗ್ನೆಸ್ ಡಿಸೋಜಾ ಮತ್ತು ಸುನಿಲ್ ಇದ್ದರು.



# ಸಾಂಸ್ಕೃತಿಕ ಚಿಂತನೆಗೆ ಸ್ಪರ್ಧೆಗಳ ಸ್ಫೂರ್ತಿ

ಪ್ರತಿಭೆಯ ಧ್ವನಿಗಳಿಗೆ ಪ್ರತಿಧ್ವನಿ ನೀಡುವ ಸದುದ್ದೇಶವನ್ನು ಹೊಂದಿರುವ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ರಂಗಗಳಲ್ಲಿ ಮಹತ್ತರವಾದ ಸಾಧನೆಯನ್ನು ಮಾಡುತ್ತಾ ಬಂದಿದೆ. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಬಹುಮುಖ್ಯ ಅಂಗವಾಗಿರುವ ಆಳ್ವಾಸ್ ಪದವಿ ಪೂರ್ವ ಕಾಲೇಜಿನ 'ಸಾಂಸ್ಕೃತಿಕ ಸಂಘ'ವು ವಿದ್ಯಾರ್ಥಿಗಳ ಬೌದ್ಧಿಕ ಹಾಗೂ ಸಾಂಸ್ಕೃತಿಕ ಕ್ರಿಯಾಶೀಲತೆ, ಸೃಜನಶೀಲತೆಗಳನ್ನು ಗುರುತಿಸಿ, ಗೌರವಿಸಿ ಪ್ರೋತ್ಸಾಹಿಸುವ ದೃಷ್ಟಿಯಿಂದ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹಲವು ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಿದೆ. ಕಲಿಯುವ ಪ್ರಕ್ರಿಯೆಯ ಜೊತೆಗೆ ವಿದ್ಯಾರ್ಥಿಗಳ ಸುಪ್ತ ಪ್ರತಿಭೆಯ ಅರಳುವಿಕೆಯನ್ನು ಪ್ರೇರೇಪಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.

ಆಳ್ವಾಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ದಿನಾಂಕ ಜುಲೈ 15 ರಿಂದ 28 ರ ವರೆಗೆ ಪ್ರಬಂಧ ಸ್ಪರ್ಧೆ,ಏಕ ಪಾತ್ರಭಿನಯ,ರಸಪ್ರಶ್ನೆ,ಚರ್ಚಾಸ್ಪರ್ಧೆ, ರಂಗೋಲಿ, ಜಾನಪದ ಗೀತೆ, ಭಾವಗೀತೆ, ಚಿತ್ರಕಲೆ, ಆಶುಭಾಷಣ ಸಹಿತ 18ಕ್ಕೂ ಹೆಚ್ಚು ಸ್ಪರ್ಧೆಗಳನ್ನು ನಡೆಸಲಾಯಿತು'



ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಸೃಜನಾತ್ಮಕ ಬರವಣಿಗೆ ತೀರ್ಪುಗಾರರ ಗಮನ ಸೆಳೆಯಿತು. ವಿದ್ಯಾರ್ಥಿಗಳು "ಆಧುನಿಕ ಜಗತ್ತಿನಲ್ಲಿ ಯುದ್ಧಭೀತಿ" ಎಂಬ ವಿಷಯವನ್ನು ಕುರಿತು ಕನ್ನಡದಲ್ಲಿ, "ಮೆಹನತ್ ಔರ್ ಸಫಲತಾ" ವಿಷಯವನ್ನು ಕುರಿತು ಹಿಂದಿಯಲ್ಲಿ "Role of Kindness in this Highly competitive world" ವಿಷಯವನ್ನು ಕುರಿತು ಇಂಗ್ಲೀಷನಲ್ಲಿ, "ಮಾಲಾನಾ ಅಬ್ದುಲ್ ಕಲಾಂ" ವಿಷಯದ ಕುರಿತು ಅರೇಬಿಕ್ ಭಾಷೆಯಲ್ಲಿ ಪ್ರಬಂಧ ಬರೆದರು.

ಕನ್ನಡ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು "ಅಸುರಕ್ಷಿತ ಆಹಾರ ಮತ್ತು ಆರೋಗ್ಯ" ವಿಷಯದ ಕುರಿತು ಮಾತನಾಡಿ ಆಧುನಿಕ ಆಹಾರ ಪದ್ಧತಿಯ ದುಷ್ಪರಿಣಾಮಗಳನ್ನು ವಿವರಿಸಿದರು. "Imಔಚಿಥಿಚಿ oಜಿ ಖಿeಛಿhಟಿoಟogಥಿ oಟಿ ouಡಿ ಟoeಚಿಟಿಣh" ವಿಷಯ ಕುರಿತು ಇಂಗ್ಲೀಷ್ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಮಾತನಾಡಿದರು. ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು 'ಪ್ರಕೃತಿ' ಹಾಗೂ ಪ್ರಕೃತಿಯ ಮೇಲೆ ಯುದ್ಧದ ಪರಿಣಾಮವೆಂಬ ವಿಷಯಗಳಿಗೆ ಬಣ್ಣ ತುಂಬಿದರು.

ಭಾವಗೀತೆ ಮತ್ತು ಜಾನಪದ ಗೀತೆ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಸುಶ್ರಾವ್ಯವಾಗಿ ಹಾಡಿ ನೆರೆದವರ ಮನಗೆದ್ದರು ಭಗವದ್ಗೀತೆ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಶ್ಲೋಕಗಳನ್ನು ನಿರರ್ಗಳವಾಗಿ ಪಠಿಸಿದರು ಆಶುಭಾಷಣ ಸ್ಪರ್ಧೆಯು ವಿದ್ಯಾರ್ಥಿಗಳ ಸಮಯೋಚಿತ ಪ್ರಜ್ಞೆಯನ್ನು ತಿಳಿಸಿದರೆ, ಏಕಪಾತ್ರಾಭಿನಯನದ ಮೂಲಕ ವಿದ್ಯಾರ್ಥಿಗಳು ವಿವಿಧ ಪಾತ್ರಗಳಿಗೆ ಜೀವ ತುಂಬಿದರು.

ವಿದ್ಯಾರ್ಥಿಗಳ ಯೋಚನಾಶಕ್ತಿ ಜ್ಞಾನ ಬೌದ್ಧಿಕ ಸಾಮರ್ಥ್ಯವನ್ನು ಪ್ರತಿಬಿಂಬಿಸುವ ರಸಪ್ರಶ್ನೆ ಸ್ಪರ್ಧೆಯನ್ನು ಮೂರು ಹಂತಗಳಲ್ಲಿ ನಡೆಸಲಾಯಿತು. ಸುಮಾರು 644 ವಿದ್ಯಾರ್ಥಿಗಳು ಹೆಸರನ್ನು ನೋಂದಾಯಿಸಿದ್ದರು. ಮೊದಲ ಹಂತದಲ್ಲಿ ಲಿಖಿತ ಪರೀಕ್ಷೆಯನ್ನು ನಡೆಸಿ 18 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಯಿತು. ದ್ವಿತೀಯ ಲಿಖಿತ ಪರೀಕ್ಷೆಯ ಮೂಲಕ ಹತ್ತು ವಿದ್ಯಾರ್ಥಿಗಳನ್ನು ಆರಿಸಿ ಇಬ್ಬರು ವಿದ್ಯಾರ್ಥಿಗಳ ಐದು ತಂಡಗಳನ್ನು ರಚಿಸಲಾಯಿತು.

ಅಂತಿಮ ಸುತ್ತಿನ ರಸಪ್ರಶ್ನೆ ಸ್ಪರ್ಧೆಯನ್ನು ಆಗಸ್ಟ್ 20ರಂದು ಆಳ್ವಾಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ ಮೊಹಮ್ಮದ್ ಸದಕತ್ ಅವರ ಮಾರ್ಗದರ್ಶನದಲ್ಲಿ ಡಾ.ವಿ.ಎಸ್ ಆಚಾರ್ಯ ಸಭಾಂಗಣದಲ್ಲಿ ನಡೆಸಲಾಯಿತು. ಪ್ರಭು ಎ.ಜಿ ಅವರು ಕ್ವಿಜ್ ಮಾಸ್ಟರ್ ಆಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಎಲ್ಲಾ ತಂಡದ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದರು. ಕ್ರೀಡೆ, ಇತಿಹಾಸ, ವಿಜ್ಞಾನ, ಸಾಮಾನ್ಯಜ್ಞಾನ, ಸಾಹಿತ್ಯ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಿದರು. ಕಾರ್ಯಕ್ರಮದಲ್ಲಿ ಉಪ ಪ್ರಾಂಶುಪಾಲರಾದ ಝಾನ್ಸಿ ಪಿ.ಎನ್. ಸಂಯೋಜಕರಾದ ಶ್ರೀಮತಿ ವಿದ್ಯಾ, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಇದ್ದರು.



## "ಚಾರುವಸಂತ" ಯಶಸ್ವಿ ಪ್ರದರ್ಶನ



ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆಶ್ರಯದಲ್ಲಿ ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ಕಲಾವಿದರು ಅಭಿನಯಿಸುವ ನಾಡೋಜ ಹಂಪನಾ ವಿರಚಿತ ದೇಸೀ ಕಾವ್ಯದ ರಂಗರೂಪ 'ಚಾರುವಸಂತ' ನಾಟಕದ ಪ್ರದರ್ಶನ ಆಗಸ್ಟ್ 18 ರಿಂದ 22 ರ ವರೆಗೆ ಸಂಜೆ ಮೂಡುಬಿದಿರೆಯ ಸ್ಕೌಟ್ಸ್- ಗೈಡ್ಸ್ ಕನ್ನಡ ಭವನದಲ್ಲಿ ನಡೆಯಿತು. ಪ್ರತಿ ನಿತ್ಯವೂ ವಿನೂತನ ಪಾತ್ರಧಾರಿಗಳಿಂದ ಮನಸೂರೆಗೊಂಡಿತು. ಜೀವನ್ ರಾಂ ಸುಳ್ಯ ನಿರ್ದೇಶಿಸಿದ ಈ ನಾಟಕಕ್ಕೆ ಡಾ.ನಾ.ದಾಮೋದರ ಶೆಟ್ಟಿ ರಂಗರೂಪ ನೀಡಿದ್ದು, ಈಗಾಗಲೇ ರಾಜ್ಯಾದ್ಯಂತ ಯಶಸ್ವೀ 26 ಪ್ರದರ್ಶನಗಳನ್ನು ಕಂಡ ಚಾರುವಸಂತ ನಾಟಕವು ಕನ್ನಡ ರಂಗಭೂಮಿಯಲ್ಲಿ ಬಹುಬೇಡಿಕೆಯ ದೃಶ್ಯಕಾವ್ಯವಾಗಿದೆ. 17 ಭಾಷೆಗಳಿಗೆ ಅನುವಾದಗೊಂಡಿರುವ ಹಂಪನಾರ ಮಹಾಕಾವ್ಯ 'ಚಾರುವಸಂತ'ವು ಆಳ್ವಾಸ್ ನ ಹೆಮ್ಮೆಯ ರಂಗ ಪ್ರಯೋಗ. ದೇಶದ ಪ್ರಾಚೀನ ಕಥಾ ಪರಂಪರೆಯಲ್ಲಿ ಚಾರುದತ್ತನ ಕಥೆಗೆ ವಿಶಿಷ್ಠ ಸ್ಥಾನವಿದೆ. ಕ್ರಿಸ್ತಪೂರ್ವದಿಂದ ತೊಡಗಿ ಜೈನ- ಅಜೈನ ಎಂಬ ಭೇದಭಾವವಿಲ್ಲದೆ ಈ ಕಥೆಯನ್ನು ಪ್ರೇರಣೆಯಾಗಿಟ್ಟುಕೊಂಡು ಹಲವು ಮಂದಿ ಹಲವು ರೀತಿಯಲ್ಲಿ ಕಾವ್ಯಗಳನ್ನು ರಚಿಸಿದ್ದಾರೆ.

ಪ್ರಸ್ತುತ ಹಂಪನಾರವರು ಶೃಂಗಾರ ಮತ್ತು ಸಾಹಸ ಪ್ರಧಾನವಾದ ಈ ಕಥೆಯ ಮೂಲಕ ವರ್ತಮಾನದ ತಲ್ಲಣಗಳಿಗೆ ಉತ್ತರಿಸಲು ಪ್ರಯತ್ನಿಸಿದ್ದಾರೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ತಿಳಿಸಿದರು.

## ಹಾಸ್ಟೆಲ್ ಅಂದರೆ ಅದು "ಆಳ್ವಾಸ್ ಹಾಸ್ಟೆಲ್"

ಆಳ್ವಾಸ್ ಅನನ್ಯ

ಆಳ್ವಾಸ್‌ನ ಅನನ್ಯತೆಗಳಿಗೆ ಶೋಭಾಯಮಾನ ರೂಪವೇ ಅದರ ವಿದ್ಯಾರ್ಥಿನಿಲಯಗಳು. ಕ್ಯಾಂಪಸ್ ಹೊಕ್ಕೊಡನೆ ನಮ್ಮನ್ನು ಆತ್ಮೀಯವಾಗಿ ಸ್ವಾಗತಿಸುವ ನೇತ್ರಾವತಿ, ಶರಾವತಿ, ಭಾಗೀರಥಿ, ಹೇಮಾವತಿ, ಫಲ್ಗುಣಿ, ಗಂಗಾ, ಹಿಮಾಲಯ ಎನ್ನುವ ಹೆಸರಿಗೆ ತಕ್ಕಂತಹ ವಿದ್ಯಾರ್ಥಿನಿಲಯಗಳು. ಪ್ರತಿಯೊಂದು ವಿದ್ಯಾರ್ಥಿನಿಲಯದ ಎದುರುಗಡೆ ಇರುವ ವಿಶಾಲವಾದ, ನಯನ ಮನೋಹರ ಉದ್ಯಾನವನಗಳು, ಸುಗಂಧ ಸೂಸುವ, ವಿವಿಧ ಜಾತಿಯ ಮರಗಿಡಗಳು. ವಿದ್ಯಾರ್ಥಿಗಳ ಮನೋವಿಕಾಸಕ್ಕೆ ಪೂರಕವಾಗಿರುವ ವಿವಿಧ ವಿನ್ಯಾಸದ, ಗೋಡೆಯ ಮೇಲೆ ಅಲಂಕೃತವಾಗಿರುವ ವಿವಿಧ ರೀತಿಯ ಕಲಾ ಪ್ರಕಾರಗಳು, ಧನಾತ್ಮಕ ಮನೋಭಾವವನ್ನು ಬೆಳಸುವ ನಿಟ್ಟಿನಲ್ಲಿ ಹಾಕಿರುವ ಧ್ಯೇಯವಾಕ್ಯಗಳು.

ಆಕರ್ಷಕ ವಿನ್ಯಾಸದ ವಿದ್ಯುತ್ ದೀಪಗಳು, ಓದಲು ಪೂರಕವಾದ ವಿಶಾಲವಾದ ಅಧ್ಯಯನ ಸಭಾಂಗಣಗಳು. ಅನುಕೂಲಕರ ವಿಶ್ರಾಂತಿ ಕೊಠಡಿಗಳು. ಗಲಾಟೆ ಗದ್ದಲಗಳಿಲ್ಲದ ಪ್ರಶಾಂತ ವಾತಾವರಣ ವಿದ್ಯಾರ್ಥಿಗಳ ಅಧ್ಯಯನಕ್ಕೆ ಸಹಕಾರಿ. ಹಾಸ್ಟೆಲ್ ನಲ್ಲಿರುವ ವಿಶಾಲವಾದ ಅಡುಗೆ ಕೋಣೆಗಳು. ಸುಸಜ್ಜಿತ ಊಟದ ಹಾಲ್, ಅತ್ಯಾಧುನಿಕ ಅಡುಗೆ ಸಲಕರಣೆಗಳು, ಶುಚಿ ರುಚಿಯಾದ ಅರೋಗ್ಯಪೂರ್ಣ ವೈವಿಧ್ಯಮಯ ಆಹಾರಗಳು ಆಳ್ವಾಸ್‌ನ ಯಶಸ್ಸಿಗೆ ಸಹಕಾರಿ.

ಕಸಕಡ್ಡಿ ಹುಡುಕಿದರೂ ಸಿಗದ ಕ್ಯಾಂಪಸ್. ಕಸ ವಿಂಗಡಣೆಗಾಗಿರುವ ವಿಶೇಷ ವ್ಯವಸ್ಥೆ, ಅತ್ಯಾಧುನಿಕ ಸ್ನಾನ ಮತ್ತು ಶೌಚಗೃಹಗಳು. ಅನಾರೋಗ್ಯ ಪೀಡಿತ ವಿದ್ಯಾರ್ಥಿಗಳನ್ನು ಉಪಚರಿಸಲು ನುರಿತ, ತಜ್ಞ ವೈದ್ಯಾಧಿಕಾರಿಗಳು, ಗಾಳಿ, ಬೆಳಕಿರುವ ವಿಶ್ರಾಂತಿ ಕೊಠಡಿಗಲಿರುವ ಆಳ್ವಾಸ್ ವಿದ್ಯಾರ್ಥಿನಿಲಯಗಳು ವಿದ್ಯಾರ್ಥಿಗಳ ಓದಿಗೆ ಪೂರಕವಾಗಿವೆ. ಹಾಸ್ಟೆಲ್ ಅಂದರೆ ಅದು "ಆಳ್ವಾಸ್ ಹಾಸ್ಟೆಲ್" ಎನಿಸುವ ಮಾದರಿ ವಿದ್ಯಾರ್ಥಿನಿಲಯಗಳು.

ಸಂಸ್ಥೆಯ ಅಧ್ಯಕ್ಷರ ವಿಶೇಷ ಕಾಳಜಿ- ಪ್ರೀತಿ ಇರುವ ಆಳ್ವಾಸ್ ವಿದ್ಯಾರ್ಥಿ ನಿಲಯಗಳ ಶುಚಿತ್ವ, ಸೊಬಗು, ಶಿಸ್ತನ್ನು ನೋಡಿ ಅನುಭವಿಸಿ ಸವಿಯಬೇಕಷ್ಟೇ ಹೊರತು ಪದಗಳಿಂದ ವರ್ಣಿಸಲಾಗದು.

## ಜ್ಯೂನಿಯರ್ ರೆಡ್ ಕ್ರಾಸ್ ಚಟುವಟಿಕೆಗಳಿಗೆ ಚಾಲನೆ

'ಕೆಂಪು ಬಣ್ಣ ಭೀಕರತೆ, ರುದ್ರತೆ ಎನ್ನುವ ಸ್ತರಗಳನ್ನು ಹೊತ್ತಿದ್ದರೂ, ಅದೇ ಬಣ್ಣ ಮುದ್ದಾದ ಮಾನವೀಯತೆಯ ಸಂಕೇತವೂ ಆಗಿದೆ' ಎಂದು ಪತ್ರಕರ್ತ ಧನಂಜಯ ಮೂಡಬಿದಿರೆ ವಿವರಿಸಿದರು. ಆಳ್ವಾಸ್ ಪದವಿ ಪೂರ್ವ ಕಾಲೇಜಿನ ಜ್ಯೂನಿಯರ್ ರೆಡ್ ಕ್ರಾಸ್ ಘಟಕದ 2025-26ನೇ ಸಾಲಿನ ಚಟುವಟಿಕೆಗಳಿಗೆ ಸೆಪ್ಟೆಂಬರ್ 13ರಂದು ಚಾಲನೆ ನೀಡಿ ಅವರು ಮಾತನಾಡಿದರು. ವಕೀಲ ಸಂತೋಷ ಪೀಟರ್ ಡಿಸೋಜಾ ಮಾತನಾಡಿ, ವಿದ್ಯಾರ್ಥಿಗಳು ಮಾನವೀಯ ಸೇವಕರಾಗಿ ಬೆಳೆವ ಅಗತ್ಯವನ್ನು ಹೇಳಿದರು. ಉಪಪ್ರಾಂಶುಪಾಲೆ ಝಾನ್ಸಿ ಪಿ.ಎನ್., ಐಆರ್‌ಸಿಎಸ್ ಮೂಡಬಿದಿರೆ ಘಟಕದ ಕಾರ್ಯದರ್ಶಿ ರಾಜೇಂದ್ರ ಪೈ ಇದ್ದರು. ಪೂರ್ಣಿಮಾ ಸ್ವಾಗತಿಸಿ, ವಿರಾನ್ ನಿರೂಪಿಸಿದರು. ಅಕ್ಷತಾ ಪಾಠಕ್ ವಂದಿಸಿದರು.

## ಆಳ್ವಾಸ್ ಅವಿಸ್ಮರಣೀಯ Heritage




ಆಳ್ವಾಸ್ ಪದವಿಪೂರ್ವ ಕಾಲೇಜಿನ ಮುಖ್ಯ ಕಟ್ಟಡ ಮತ್ತು ಮೊದಲ ವಸತಿ ನಿಲಯದ ನಿರ್ಮಾಣ ಹಂತದ ಚಿತ್ರ (2003-04)

# ಆಳ್ವಾಸ್ ಕಾಲೇಜು ಸತತ 23 ವರ್ಷಗಳಿಂದ ಚಾಂಪಿಯನ್ಸ್

## ಮಂಗಳೂರು ವಿವಿ ವೈಯಕ್ತಿಕ ಕ್ರೀಡೆಗಳು ಮತ್ತು ಗುಂಪು ಆಟಗಳು



### ಜಾಗತಿಕ ವಿಶ್ವವಿದ್ಯಾಲಯಗಳ ಕ್ರೀಡಾಕೂಟ: 'ಆಳ್ವಾಸ್'ಗೆ ಕಂಚು

**ಮೂಡುಬಿದಿರೆ:** ಜರ್ಮನಿಯ ರಿಯಾನ್-ರೋಹೂರ್‌ನಲ್ಲಿ ನಡೆದ ವರ್ಲ್ಡ್ ಯುನಿವರ್ಸಿಟಿ ಗೇಮ್ಸ್ 2025(ಜಾಗತಿಕ ವಿಶ್ವವಿದ್ಯಾಲಯಗಳ ಕ್ರೀಡಾಕೂಟ)ರಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಶಾಲಿನಿ 20 ಕಿಮೀ ನಡಿಗೆಯಲ್ಲಿ ಕಂಚಿನ ಪದಕವನ್ನು ಪಡೆದುಕೊಂಡರು. ಈ ಬಾರಿಯ ಜಾಗತಿಕ ವಿಶ್ವವಿದ್ಯಾಲಯಗಳ ಕ್ರೀಡಾಕೂಟದಲ್ಲಿ ಆಳ್ವಾಸ್‌ನ ಕ್ರೀಡಾ ದತ್ತು ಯೋಜನೆಯ 11 ಕ್ರೀಡಾಪಟುಗಳು ಪಾಲ್ಗೊಂಡಿದ್ದರು. 11 ಬಾರಿ ಒಲಿಂಪಿಕ್ಸ್ ಸೇರಿದಂತೆ ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ದೇಶವನ್ನು ಪ್ರತಿನಿಧಿಸಿದ ಸಾಧನೆಯನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಕಾಲೇಜು ಹೊಂದಿದೆ.



**1.** ಮಂಗಳೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಅಥ್ಲೆಟಿಕ್ಸ್‌ನ ಎಲ್ಲಾ 47 ಕೂಟ ದಾಖಲೆಗಳನ್ನು ಮಾಡಿದ ಒಂದೇ ಒಂದು ಶಿಕ್ಷಣ ಸಂಸ್ಥೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ. ರಾಷ್ಟ್ರೀಯ ವಿಶ್ವವಿದ್ಯಾನಿಲಯಗಳ ಅಂತರ ಕಾಲೇಜು ಕ್ರೀಡಾಕೂಟಗಳ ಇತಿಹಾಸದಲ್ಲೇ ಇದು ಮೊದಲು.

**2.** ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ (ಪುರುಷ-ಮಹಿಳಾ) ಸಮಗ್ರ ಪ್ರಶಸ್ತಿಯನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು 23 ಬಾರಿ ಮುಡಿಗೇರಿಸಿಕೊಂಡಿದೆ.

**3.** ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಅಥ್ಲೆಟಿಕ್ಸ್‌ನ 47 ದಾಖಲೆಗಳ ಪೈಕಿ 6 ದಾಖಲೆಗಳು ಮಂಗಳೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಹೆಸರಿನಲ್ಲಿದೆ.

**4.** ರಿಯೋ–2016, ಟೋಕಿಯೋ–2020, ಪ್ಯಾರಿಸ್–2024 ಮೂರು ಒಲಂಪಿಕ್ಸ್‌ಗಳಲ್ಲಿ 9 ಕ್ರೀಡಾಪಟುಗಳು ಭಾಗವಹಿಸಿ 11 ಪ್ರತಿನಿಧಿತ್ವವನ್ನು ಹೊಂದಿರುವುದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಹೆಗ್ಗಳಿಕೆ.

**ಮೂಡುಬಿದಿರೆ:** ವಿಶ್ವವಿದ್ಯಾಲಯದ ಎಲ್ಲಾ ಕ್ರೀಡಾ ದಾಖಲೆಗಳನ್ನು ತನ್ನ ಹೆಸರಿಗೆ ಮಾಡಿಕೊಂಡ ಆಳ್ವಾಸ್ ಕಾಲೇಜು (ಸ್ವಾಯತ್ತ), ಈಗ ಮತ್ತೊಂದು ಗೌರವಕ್ಕೆ ಪಾತ್ರವಾಗಿದೆ. ಸತತ 23 ವರ್ಷ ವಿಶ್ವವಿದ್ಯಾನಿಲಯ ಮಟ್ಟದ ಸಮಗ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ.

45 ವರ್ಷಗಳನ್ನು ಪೂರೈಸಿರುವ ಮಂಗಳೂರು ವಿಶ್ವವಿದ್ಯಾಲಯದ ಜೊತೆ 200ಕ್ಕೂ ಹೆಚ್ಚು ಕಾಲೇಜುಗಳು ಸಂಲಗ್ನತೆ ಹೊಂದಿವೆ. ಆದರೆ, ಸ್ಥಾಪನೆಯಾದ 30 ವರ್ಷಗಳಲ್ಲಿ 23 ವರ್ಷ ಬಾಲಕ ಮತ್ತು ಬಾಲಕಿಯರ ಸೇರಿದಂತೆ ಸಮಗ್ರ ಪ್ರಶಸ್ತಿ ತನ್ನದಾಗಿಸಿಕೊಂಡ ಅನನ್ಯತೆಯನ್ನು ದೇಶದಲ್ಲಿಯೇ ಹೊಂದಿದ ಕಾಲೇಜು 'ಆಳ್ವಾಸ್ ಕಾಲೇಜು (ಸ್ವಾಯತ್ತ)'. ಇದು ಶೈಕ್ಷಣಿಕ ಕ್ಷೇತ್ರದ ಜೊತೆ ಕ್ರೀಡಾ ಕ್ಷೇತ್ರದಲ್ಲೊಂದು ಮೈಲುಗಲ್ಲಾಗಿದ್ದು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ। ಎಂ. ಮೋಹನ ಆಳ್ವ ಈ ಸಾಧನೆಯ ಹಾದಿಯ ರೂವಾರಿಗಳಾಗಿದ್ದಾರೆ.



ಮಂಗಳೂರು ವಿಶ್ವವಿದ್ಯಾಲಯ ಮಟ್ಟದ ಅಂತರಕಾಲೇಜು ವೈಯಕ್ತಿಕ ಕ್ರೀಡೆ ಮತ್ತು ಗುಂಪು ಆಟಗಳ 42 ವಿಭಾಗಗಳಲ್ಲಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ಅತ್ಯುತ್ತಮ ಸಾಧನೆ ತೋರಿದ ಆಳ್ವಾಸ್ ಕಾಲೇಜು (ಸ್ವಾಯತ್ತ), ಈ ಶೈಕ್ಷಣಿಕ ವರ್ಷದಲ್ಲಿಯೂ ಪುರುಷರ ಹಾಗೂ ಮಹಿಳೆಯರ ಎರಡೂ ವಿಭಾಗಗಳಲ್ಲಿ ಸಮಗ್ರ ಚಾಂಪಿಯನ್‌ಷಿಪ್ ಪಟ್ಟವನ್ನು ತನ್ನದಾಗಿಸಿಕೊಂಡಿದೆ.

ಹೀಗಾಗಿ ಆಳ್ವಾಸ್ ಕಾಲೇಜು ಸತತ 23 ವರ್ಷಗಳಿಂದ ಈ ಸಾಧನೆಯನ್ನು ತನ್ನದಾಗಿಸಿಕೊಂಡಿದೆ. ಈ ಬಾರಿ ಪುರುಷರ ವಿಭಾಗದಲ್ಲಿಯೂ 308 ಅಂಕಗಳು ಹಾಗೂ ಮಹಿಳೆಯರ ವಿಭಾಗದಲ್ಲಿಯೂ 308 ಅಂಕಗಳನ್ನು ಗಳಿಸಿ ಒಟ್ಟು 616 ಅಂಕಗಳೊಂದಿಗೆ ಆಳ್ವಾಸ್ ಅಗ್ರಸ್ಥಾನವನ್ನು ಪಡೆದಿದೆ.

ಅಥ್ಲೆಟಿಕ್ಸ್, ಕ್ರಾಸ್‌ಕಂಟ್ರಿ, ಬಾಲ್ ಬ್ಯಾಡ್ಮಿಂಟನ್, ಕಬಡ್ಡಿ, ಖೋ-ಖೋ, ವಾಲಿಬಾಲ್, ಬ್ಯಾಡ್ಮಿಂಟನ್, ಹ್ಯಾಂಡ್‌ಬಾಲ್, ಸಾಫ್ಟ್ ಬಾಲ್ , ವೇಟ್ ಲಿಫ್ಟಿಂ ಗ್, ಪವರ್ ಲಿಫ್ಟಿಂ ಗ್, ಬೆಸ್ಟ್ ಫಿಸಿಕ್, ಕ್ರಿಕೆಟ್, ಚೆಸ್, ಕರಾಟೆ, ಟೇಬಲ್ ಟೆನ್ನಿಸ್, ನೆಟ್‌ಬಾಲ್, ಹಾಕಿ, ಫುಟ್‌ಬಾಲ್, ಕುಸ್ತಿ, ಟಗ್ ಆಫ್ ವಾರ್ ಸೇರಿದಂತೆ ವಿವಿಧ ಕ್ರೀಡಾ ವಿಭಾಗಗಳಲ್ಲಿ ತೋರಿದ ಅತ್ಯುತ್ತಮ ಪ್ರದರ್ಶನದ ಆಧಾರದ ಮೇಲೆ ಮಂಗಳೂರು ವಿವಿ ಅಂಕಗಳನ್ನು ಲೆಕ್ಕ ಹಾಕಿ ಸ್ಥಾನ ನೀಡುತ್ತದೆ. ಈ ಪ್ರಕ್ರಿಯೆಯಲ್ಲಿ ಆಳ್ವಾಸ್ ಕಾಲೇಜಿನ ಪುರುಷರ ಹಾಗೂ ಮಹಿಳೆಯರ ತಂಡಗಳು ಪ್ರಥಮ ಸ್ಥಾನದೊಂದಿಗೆ ಸಮಗ್ರ ತಂಡ ಪ್ರಶಸ್ತಿ ಪಡೆದಿವೆ.

## ದಸರಾದಲ್ಲೂ ಆಳ್ವಾಸ್ ಅದ್ವಿತೀಯ ಸಾಧನೆ

ಮೂಡುಬಿದಿರೆ: ಮೈಸೂರು ದಸರಾ ಪ್ರಯುಕ್ತ ನಡೆದ ರಾಜ್ಯ ಮಟ್ಟದ ದಸರಾ ಸಿಎಂ ಕಪ್ 2025ರಲ್ಲಿ ಆಳ್ವಾಸ್ ತಂಡವು ಹಲವು ಪ್ರಶಸ್ತಿ ಮತ್ತು ಪದಕಗಳನ್ನು ಪಡೆದುಕೊಂಡಿದೆ.

ತಂಡ ವಿಭಾಗದ ಕ್ರೀಡೆಗಳಾದ ಪುರುಷರ ಕಬಡ್ಡಿ ಮತ್ತು ಮಹಿಳೆಯರ ಬಾಲ್‌ಬ್ಯಾಡ್ಮಿಂಟನ್‌ನಲ್ಲಿ ಆಳ್ವಾಸ್ ತಂಡ ಪ್ರಥಮ ಸ್ಥಾನವನ್ನು ಪಡೆಯಿತು. ಅಂತೆಯೇ ಮಹಿಳಾ ಕಬಡ್ಡಿ, ಪುರುಷರ ಖೋ-ಖೋ, ಬಾಲ್‌ಬ್ಯಾಡ್ಮಿಂಟನ್‌ನಲ್ಲಿ ಆಳ್ವಾಸ್ ತಂಡ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿತು. ಆಳ್ವಾಸ್‌ನ ನಾಗ್ರೇಂದ್ರ ಡಿಸ್ಕಸ್ ಥ್ರೋನಲ್ಲಿ, 800 ಮೀ ಓಟದಲ್ಲಿ ಆಳ್ವಾಸ್‌ನ ರೇಖಾ ಬಸಪ್ಪ ಅಥ್ಲೆಟಿಕ್ಸ್‌ನಲ್ಲಿ ನೂತನ ಕೂಟ ದಾಖಲೆ ನಿರ್ಮಿಸಿದ್ದಾರೆ. ಪುರುಷ ಮತ್ತು ಮಹಿಳಾ ವಿಭಾಗದ ವೈಯಕ್ತಿಕ ವಿಭಾಗಗಳಲ್ಲಿ ಒಟ್ಟು 6 ಚಿನ್ನ, 2 ಬೆಳ್ಳಿ, 2 ಕಂಚಿನ ಪದಕವನ್ನು, ವೇಯ್ಟ್ ಲಿಫ್ಟಿಂ ಗ್‌ನಲ್ಲಿ ಒಟ್ಟು 8 ಚಿನ್ನ, 4 ಬೆಳ್ಳಿ, 4 ಕಂಚಿನ ಪದಕವನ್ನು, ಕುಸ್ತಿ ಪಂದ್ಯಾಟದಲ್ಲಿ ಒಟ್ಟು 5 ಕಂಚಿನ ಪದಕ, ಯೋಗಾಸನ ಸ್ಪರ್ಧೆಯಲ್ಲಿ 2 ಬೆಳ್ಳಿ ಪದಕಗಳನ್ನು ಪಡೆದುಕೊಂಡಿದೆ.


ALVA'S AUTONOMOUS COLLEGE
Moodubidire - 574 227
ALVA'S Education Foundation
Center For Post Graduate Studies and Research

POST GRADUATE COURSES
ADMISSION OPEN 2025 -26

SCIENCE (M.SC)
M.SC - PHYSICS
M.SC - MATHEMATICS
M.SC - ANALYTICAL CHEMISTRY
M.SC - GENERAL CHEMISTRY
M.SC - ORGANIC CHEMISTRY
M.SC - BIOTECHNOLOGY
M.SC - ZOOLOGY
M.SC - BOTANY
M.SC - FOOD SCIENCE AND NUTRITION
M.SC - PSYCHOLOGY

COMMERCE
M.COM - H.R.D
M.COM - FINANCE AND TAXATION

ARTS
MA - ENGLISH
MA - JOURNALISM & MASS COMMUNICATION
MSW - MASTER OF SOCIAL WORK

Admission Contact No:
8971393222, 8951987766, 8147760394



ALVA'S ACADEMY FOR EXCELLENCE
VIDYAGIRI, MOODUBIDIRE -574227
30 YEARS OF EXPERIENCE IN COACHING FOR COMPETITIVE EXAMS
LONG TERM NEET/JEE 2026
REPEATERS' BATCH
RANK ENHANCEMENT PROGRAM, FULL TIME RESIDENTIAL

NEET ACHIEVERS
185 MBBS ADMISSIONS 2021
377 MBBS ADMISSIONS 2022
392 MBBS ADMISSIONS 2023
448 MBBS ADMISSIONS 2024

JEE ACHIEVERS 2025
ABOVE 99 PERCENTILE 04
ABOVE 98 PERCENTILE 15
ABOVE 97 PERCENTILE 52
ABOVE 95 PERCENTILE 115
ABOVE 90 PERCENTILE 292

NUMBER OF STUDENTS QUALIFIED FOR JEE ADVANCED 515
SUBJECT WISE 99 PERCENTILE AND ABOVE 77 STUDENTS

SPECIAL UNIQUE FEATURES
• Experienced Faculty.
• Weekly NEET/ JEE mock tests.
• Cumulative Testing.
• 24/7 Medical Facilities.
• Extensive Chapter wise study material.
• Separate hostel facility for boys and girls.

SPECIAL FEE CONCESSION AVAILABLE FOR MERITORIOUS STUDENTS
8884477588, 8884499737, 8884499747